Sri. B.I. Patil : That proposal we don't want sir. He is giving help to us; that's O.K. Sir.

Mr. Speaker :- Mr. B.I. Patil, the Government is very keen to give you protection. They will meticulously follow all the procedure required under law to register cases against all those people whom you have complained against and action will be taken. There is no problem. Beyond this, if you have any problem, you are at liberty to come and see me. I will take up the matter with the authorities concerned.

ಶ್ರೀ ಪಾಟಾಳ್ ನಾಗರಾಜ್ :- ಎಲ್ಲರನ್ನೂ ಬಂಧಿಸಬೇಕು ಬರೀ 9 ಜನರು ಆಗುವುದಿಲ್ಲ.

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) :- ಮಾನ್ಯ ಅಧ್ಯಕ್ಷರೇ ಒಂದುನಿಮಿಷ. ಮಾನ್ಯ ಪಾಟಾಳ್ ನಾಗರಾಜ್ ಅವರು ಎಂ. ಇ. ಎಸ್ ಸದಸ್ಯರ ಬಗ್ಗೆ ಬಹಳ ಕಾಳಜಿವಹಿಸಿ. ಒಂದು ಷರತ್ತಿನ ಮೇಲೆ ಬೆಂಬಲ ಕೊಟ್ಟಿದ್ದಾರೆ. ಆದರೆ ನನ್ನ ಮೇಲೆ ಹಲ್ಲೆ ಆಯಿತು ಎನ್ನುವ ಪ್ರಶ್ನೆ ಬಂದಾಗ ಅವರು ಮಾಡನಾಡಲೇ ಇಲ್ಲ. ನನ್ನ ಕಡೆಯಿಂದ ಅವರಿಗೆ ಕರ್ನಾಟಕಕ್ಕೆ ಏನೂ ಸೇರಬೇಕಾದುದು ಇರಲಿಲ್ಲವಲ್ಲಾ ಅದಕ್ಕೆ. ಹಾಗಾಗಿ ಮಾಡನಾಡಲಿಲ್ಲ ಎಂದು ಕಾಣುತ್ತದೆ.

ಶ್ರೀ ಪಾಟಾಳ್‌ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಪ್ರಮಾಣಿಕವಾಗಿ ನಾನು ಗಮನಿಸಿಲ್ಲ ದಯವಿಟ್ಟು ಮಾನ್ಯ ಶಿವಪ್ಪನವರು ಕ್ಷಮಿಸಬೇಕು. ಆ ತರಹ ಎಂದೂ ನಾನು ಇಲ್ಲ.

(8) ವಿತ್ತೀಯ ಕಾರ್ಯಕಲಾಪಗಳು : 1998-99ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ

★ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ ಈಗಾಗಲೇ ನಾನು ಅನೇಕ ವಿಷಯದ ಮೇಲೆ ಬೆಳಕನ್ನು ಚೆಲ್ಲಿದ್ದಾನೆ. ಮತ್ತು ನಮ್ಮ ಅರ್ಥಸಚಿವರು ಮಂಡಿಸಿದಂತಹ 1998-99ರ ಬಜೆಟ್‌ನಲ್ಲಿ ಯಾವ ರೀತಿಯಾಗಿ ಇದು ಬಡವರ ವಿರೋಧಿ ಆಗಿದೆ ಮತ್ತು ಸಾಮಾನ್ಯ ಜನರ ವಿರೋಧಿ ಆಗಿದೆ ಎನ್ನತಕ್ಕಂಥಾದ್ದನ್ನು ನಾನು ಅನೇಕ ಉದಾಹರಣೆಗಳನ್ನು ಕೊಟ್ಟು ಅವರ ಮನವನ್ನು ಒಲಿಸುವಂಥಾದ್ದು ಮತ್ತು ಅವರಿಗೆ ಈ ಮಾಡಿದಂಥ ಏನು ತಪ್ಪು ಇದೆ ಇದನ್ನು ಸರಿಪಡಿಸಬೇಕೆಂದು ಹೇಳಿ ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ. ಆದರೆ ಅವರು ಎಷ್ಟರ ಮಟ್ಟಿಗೆ ಇದನ್ನು ತಿದ್ದಿ ಕೊಳ್ಳುತ್ತಾರೋ ಗೊತ್ತಿಲ್ಲ. ಏಕೆಂದರೆ ಅವರು ಈಗಾಗಲೇ 176 ಐಟಂ ಪೈಕಿ ಸುಮಾರು 151 ಐಟಮ್ ಮೇಲೆ ಏನು ತೆರಿಗೆಯನ್ನು ಹೆಚ್ಚು ಮಾಡಿ ಸಾಧಾರಣ ಜನರಿಗೆ ತೊಂದರೆಗೆ ಈಡು ಮಾಡಿದ್ದಾರೋ ಅದರ ಬಗ್ಗೆ ಅವರು ಮನವರಿಕೆ ಮಾಡಿಕೊಳ್ಳುತ್ತಾರೆ ಎನ್ನತಕ್ಕಂಥಾದ್ದನ್ನು ನಾನು ಭಾವಿಸುತ್ತೇನೆ.

(ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ. ಮಾಮನಿ) ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು). ಮತ್ತು ಅವರು 27 ನೇ ತಾರೀಖು ಉತ್ತರ ಕೊಡುವಾಗ...

ಶ್ರೀ ಸಿದ್ದರಾಮಯ್ಯ :- 26ನೇ ತಾರೀಖು ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- 27ನೇ ತಾರೀಖು ಕೊಡುತ್ತೇನೆಂದು ಹೇಳಿದಿರಿ. ಅದಕ್ಕೆ ಯಾವಾಗಲೂ 18 ಮತ್ತು 9 ಮತ್ತು 27 ಅಂದರೆ 7 ಮತ್ತು 2 ಒಟ್ಟು 9; ಅದಕ್ಕೆ ಏನಾದರೂ ಬದಲಾವಣೆ ಮಾಡುತ್ತಿರೇನೋ ಎಂದು ತಿಳಿದಿಕೊಂಡಿದ್ದೆ. ತಮ್ಮ ಬಜೆಟ್ ಸಹ ಅದೇ ರೀತಿ ಇದೆ. ಆದರೆ ಇವತ್ತು ಅನೇಕ ವಸ್ತುಗಳ ಮೇಲೆ ತಾವು ತೆರಿಗೆಯನ್ನು ಹೆಚ್ಚಿಸಿ ಇನ್ನೂ ಇನ್ ಫ್ಲೇಷನ್ ಕಡೆ ಹೋಗುತ್ತಿದ್ದೀರಿಯೇ ಹೊರತಾಗಿ ತಾವು ಅದನ್ನು ಕಡಿಮೆ ಮಾಡತಕ್ಕಂಥ ಯಾವ ಪ್ರಯತ್ನವನ್ನೂ ಸಹ ಮಾಡುತ್ತಿಲ್ಲ. ಬಡವರ ಮೇಲೆ ಎನು ಭಾರ ಆಗಿದೆ ಆ ಭಾರವನ್ನು ಕಡಿಮೆ ಮಾಡತಕ್ಕಂಥಾದ್ದು ಬಿಟ್ಟು ಬಡವರ ಮೇಲೆ ಇನ್ನಷ್ಟು ಭಾರವನ್ನು ಹಾಕತಕ್ಕಂಥಾ ತಮ್ಮ ಪ್ರಯತ್ನ ಇದರಲ್ಲಿ ನಡೆದಿದೆ. ಇದು ಒಂದು ಸೇಡಿನ ಭಾವನೆಯನ್ನು ಇವರು ತೆಗೆದುಕೊಂಡಿದ್ದಾರೆ. ಜನ ನಮಗೆ ಸಹಾಯ ಮಾಡಲಿಲ್ಲ, ಬೆಂಬಲ ನೀಡಿಲ್ಲ ಅದಕ್ಕೆ ನಾವು ಎನು ಮಾಡಬೇಕು ಕನಿಷ್ಟ ಯಾವ ಜನ ನಮಗೆ ಬೆಂಬಲ ಕೊಟ್ಟಿಲ್ಲ ಅವರಿಗೆ ಪಾಠ ಕಲಿಸೋಣ ಎಂದುಹೇಳಿ 151 ಐಟಂ ಮೇಲೆ ತೆರಿಗೆ ಹಾಕಿದ್ದೀರಿ. ಮತ್ತು ಕಡಿಮೆ ಯಾರಿಗೆ ಮಾಡಿದ್ದಾರೆ ಅಂದರೆ ಗ್ಯಾನ್ಸೆಟ್ ಬಾರರಿಗೆ, ಸ್ಯಾನಿಟರಿ ಮ್ಯಾನುಫ್ಯಾಕ್ಚರರ್ಸ್‌ಗೆ, ಟೈಲ್ಸ್ ಮಾಡತಕ್ಕಂಥವರಿಗೆ, ಮೊಲ್ಯಾಸಿಸ್ ಅನ್ನು ಪರ್ಚೇಸ್ ಮಾಡತಕ್ಕಂಥಾ ಡಿಸ್ಟಿಲರಿ ಮಾಲೀಕರಿಗೆ ಆಮೇಲೆ ಹೆಲಿಕ್ಯಾಪ್ಟರ್, ಎರೋಪ್ಲೇನ್ ಇದರ ಸಾಮಾನುಗಳು ಅದರ ಬಿಡಿ ಭಾಗಗಳನ್ನು ಖರೀದಿ ಮಾಡತಕ್ಕಂಥವರಿಗೆ ಮೊದಲು 12 ಪರ್ಸೆಂಟ್ ಇದ್ದದ್ದು 10 ಮಾಡಿದ್ದಾರೆ. ಅಂದರೆ ಇವರಿಗೆ ಯಾರುಹೇಳಿದರೋ ಗೊತ್ತಾಗಲಿಲ್ಲ. ಪ್ರಿಂಟ್ ಎನಾದರೂ ತಪ್ಪಾಗಿದೆಯೋ ಎನೋ ನೋಡಿ. ಬಡವರಿಗೆ ಕೊಡಬೇಕು ಅಂತ ಏನು ಮಾಡಿದ್ದಿರಿ ಅದು ಎನಾದರೂ ವ್ಯತ್ಯಾಸ ಆಗಿದೆಯೋ ಎನೋ ಎಂದು ನನಗೆ ಗೊತ್ತಾಗುತ್ತಿಲ್ಲ. ತಾವು ವೀಟ್ ಪ್ರಾಡಕ್ಟ್ಸ ಎಂದು ತಮ್ಮ ಭಾಷಣದಲ್ಲಿ ಹೇಳಿದ್ದೀರಿ. ನಮ್ಮ ಅನುಬಂಧದಲ್ಲಿ ಅದು ಬಂದಿಲ್ಲ. ಮೊಯ್ಲಿಯವರ ಸರ್ಕಾರ ಇದ್ದಾಗ ಪರ್ಟಿಕ್ಯುಲರ್ ಆಗಿ ವೀಟ್ ಪ್ರಾಡಕ್ಟ್ ಬ್ರೆಡ್‌ಗಾಗಿ ಉಪಯೋಗ ಮಾಡುವುದರ ಬಗ್ಗೆ ಯೋಚನೆ ಮಾಡಿ ತೆರಿಗೆಯನ್ನು ಕಡಿಮೆ ಮಾಡಿದ್ದೆವು. ಅನೇಕ ಹಳ್ಳಿಗಳಲ್ಲಿ ಪಟ್ಟಣಗಳಲ್ಲಿ ಇವತ್ತು ಸಾಮಾನ್ಯ ಜನ ಕೂಡ ಬ್ರೆಡ್‌ನ್ನು ಉಪಯೋಗ ಮಾಡುತ್ತಾರೆ. ವಿಶೇಷವಾಗಿ ಮೈನಾರಿಟಿ ಇರತಕ್ಕಂಥ ಜಾಗದಲ್ಲಿ ಅಂತೂ ಬೆಳಗ್ಗೆ ಇವತ್ತಿನ ದಿವಸ ಬ್ರೆಡ್ ಹೆಚ್ಚು ಉಪಯೋಗಿಸುತ್ತಾರೆ. ಅಂತಹ ಒಂದು ವೀಟ್ ಪ್ರಾಡಕ್ಟ್‌ನ್ನು ಸಹ ಇವತ್ತು ನೀವು ನಿಮ್ಮ ಎಲ್ಲಾ ಟರ್ನ್‌ಓವರ್ ಟ್ಯಾಕ್ಸ್, ಸೇಲ್ಸ್ ಟ್ಯಾಕ್ಸ್, ಎಲ್ಲಾ ಸೇರಿ ಒಂದು ಕ್ವಿಂಟಾಲ್‌ಗೆ 100 ರಿಂದ 150 ರೂಪಾಯಿಗಳವರೆಗೂ ಹೋಗತಕ್ಕಂಥ ಸಾಧ್ಯತೆ ಇದೆ. ಅವರು ಗ್ರಾಹಕರ ಮೇಲೆ ಹಾಕುತ್ತಾರೆ. ಅವರು ನೇರವಾಗಿ ತೆಗೆದುಕೊಂಡು ಹೋಗತಕ್ಕದ್ದು ಇಲ್ಲ. ಅವರು ಟ್ಯಾಕ್ಸ್ ಕೊಟ್ಟು ಕೊಂಡುಕೊಳ್ಳುತ್ತಾರೆ ಅವರು ಇನ್ನೊಬ್ಬರಿಗೆ ಬ್ರೆಡ್ ಇತರೆ ಸಾಮಾನುಗಳನ್ನು ಮಾರಾಟ ಮಾಡುವಾಗ ಹಾಕುತ್ತಾರೆ. ಮತ್ತು ಅನೇಕ ಜನ ಬ್ರೆಡನ್ನು ಊಟದ ರೂಪದಲ್ಲಿ ಸಹ ಸ್ವೀಕಾರ ಮಾಡುತ್ತಾರೆ. ನಮ್ಮ ಹೈದ್ರಾಬಾದ್ ಕರ್ನಾಟಕದಲ್ಲಿ ಅಂತೂ ಇದನ್ನು ಉಪಯೋಗ ಮಾಡುತ್ತಾರೆ. ವಿಶೇಷವಾಗಿ ನೀವೂ ಕೂಡ ನೋಡಿರಬಹುದು. ಅದಕ್ಕೆ ಹಿಂದೆ ಯಾವ ರೀತಿಯಾಗಿತ್ತು ಅದನ್ನು ಬಿಟ್ಟು ಅದರ ಮೇಲೆ ನೀವು ಪುನ: ಟ್ಯಾಕ್ಸ್ ಹಾಕತಕ್ಕಂಥಾದ್ದನ್ನು ಮಾಡುತ್ತಿದ್ದೀರಿ. ಎಲ್ಲಿ ತೆರಿಗೆಯನ್ನು ಹಾಕಿದ್ದಿರಿ. ಯಾವ ಬಾಬಿನಿಂದ ನಾವು ಹಣವನ್ನು ಸಂಗ್ರಹಿಸಬಹುದು ಅಲ್ಲಿ ರಿಯಾಯಿತಿ ಕೊಟ್ಟಿದ್ದೀರಿ. ಇದರಿಂದ ನಮಗೆ ಒಂದು ಸಂಶಯ ಎನು ಬರುತ್ತಿದೆ ಅಂದರೆ ಈ ಸರ್ಕಾರ ಶ್ರೀಮಂತರ ಪರವಾಗಿದೆ. ಈ ಸರ್ಕಾರ ಶ್ರೀಮಂತರಿಗೆ ಸಹಾಯ ಮಾಡುವುದಕ್ಕೆ ಈ ಎಲ್ಲಾ ಅನುಕೂಲಗಳನ್ನು ಮಾಡಿಕೊಟ್ಟಿದೆ. ಈ ಒಂದು ಸ್ಪಷ್ಟ ಚಿತ್ರ ನಮಗೆ ಬರುತ್ತಿದೆ. ನೀವು ವೊಲ್ಯಾಸಿಸ್ ಮೇಲೆ ಕಾಕಂಬಿ ಮೇಲೆ ಗ್ಯಾನ್ಸೆಟ್ ಮೇಲೆ ಇಂತಾದ್ದು ಎಲ್ಲಾ ಕಣ್ಣಿಗೆ ಬಿದ್ದ ಮೇಲೆ ಹೆಲಿಕ್ಯಾಪ್ಟರ್ ಮೇಲೆ ಎರೋಪ್ಲೇನ್

ಸ್ಪೇರ್ ಪಾರ್ಟ್ಸ್ ಮೇಲೆ ಅಲ್ಯೂಮಿನಿಯಂ ಮೇಲೆ ವೀಟ್ ಪ್ರಾಡಕ್ಟ್ ಮೇಲೆ ಎರೋಪ್ಲೇನ್ ಸ್ಪೇರ್ ಪಾರ್ಟ್ಸ್ ಮೇಲೆ ಅಲ್ಯೂಮಿನಿಯಂ ಮೇಲೆ ವೀಟ್ ಪ್ರಾಡಕ್ಟ್ ಮೇಲೆ, ತೆರಿಗೆ ಹೆಚ್ಚು ಮಾಡುವಾಗ ಖಂಡಿತವಾಗಿನಮಗೆ ಸಂಶಯ ಬರುತ್ತಿದೆ. ಈ ಸರ್ಕಾರ ಬಡವರ ಪರ ಇಲ್ಲ ಎನ್ನುವುದು ಇದರಿಂದ ವಿಚಿತ. ನಾನು ರಿಸೋರ್ಸ್‌ಸ್ ಮೊಬಲೈಜೇಶನ್ ಬಗ್ಗೆ ಮಾತನಾಡುತ್ತಿದ್ದೆ ಅಷ್ಟರಲ್ಲಿ ಇ ಎಂ ಎಸ್ ಅವರ ನಿಧನ ವಾರ್ತೆ ಬಂದ ಮೇಲೆ ನಾನು ಅಲ್ಲಿಗೆ ನಿಲ್ಲಿಸಬೇಕಾಯಿತು. ಈ ರಿಸೋರ್ಸ್‌ಸ್ ಮೊಬಲೈಜೇಶನ್‌ನಲ್ಲಿ ಕೂಡ ಅವರು ವಿಫಲರಾಗಿದ್ದಾರೆ ಎನ್ನತಕ್ಕಂಥಾದ್ದು ನಾನು ಏಕೆ ಉದಾಹರಣೆಯಾಗಿ ಹೇಳಿದೆ 550 ಕೋಟಿ ರೂಪಾಯಿ ಎಂದು ಅದನ್ನು ನಾನು ಬಿಡಿಸಿ ಹೇಳುತ್ತೇನೆ. ಅದು ನಿಮಗೂ ಕೂಡ ಗೊತ್ತಾಗಲಿ ಕೊನೆಗೆ ನಿಮ್ಮ ಅಧಿಕಾರಿಗಳನ್ನು ಕರೆಸಿ ಚರ್ಚೆ ಮಾಡಿ ರಿವ್ಯೂ ಮಾಡಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಡೆವಲಪ್‌ಮೆಂಟ್ ಬಗ್ಗೆ ತಾವು ರಿವ್ಯೂ ಮಾಡಿದರೆ ಚಿಂತೆ ಇಲ್ಲ. ಮಾನ್ಯ ಜೆ. ಎಚ್. ಪಟೇಲರು ಅದು ಎಲ್ಲಾ ಬಿಟ್ಟು ನಮ್ಮ ಪಾರ್ಟಿಗೆ ವಿರುದ್ಧ ನೀವು ಕೆಲಸ ಮಾಡಿದ್ದೀರಿ ಎಂದು ಹೇಳಿ ಐ ಎ ಎಸ್ ಅಧಿಕಾರಿಗಳಿಗೆ ಬೈದರು ಎಂದುಹೇಳಿ ಪತ್ರಿಕೆಯಲ್ಲಿ ಬಂದಿದೆ. ನಮ್ಮ ಸರ್ಕಾರ ಎಷ್ಟು ದಿವಸ ಉಳಿಯುತ್ತದೆ. ನೀವು ರೀತಿ ಕೇಳಿದಿರಿ ನಿಮಗೆ ಎಷ್ಟು ಧೈರ್ಯ ಎಂದು ಹೇಳಿ ಐ ಎ ಎಸ್ ಅಧಿಕಾರಿಗಳನ್ನು ಪ್ರಶ್ನೆ ಮಾಡಿದರು ಎಂದು ಅಧಿಕಾರಿಗಳನ್ನು ಡೆವಲಪ್‌ಮೆಂಟಲ್ ವರ್ಕ್ ರಿವ್ಯೂ ಮಾಡಬೇಕೆಂದು ಹೇಳಿ ನೀವು ಕರೆಸಿದ್ದೀರಿ. ಅದನ್ನು ಮಾಡುವುದು ಕರೆಸಿಲ್ಲ. ಇವರು ಕುಳಿತಿದ್ದು 45 ನಿಮಿಷ ಅದರಲ್ಲಿ ಅರ್ಧ ಗಂಟೆ ಐ ಎ ಎಸ್ ಅಧಿಕಾರಿಗಳನ್ನು ಬೈದಿದ್ದು ಆಯಿತು. ನಿಮ್ಮ ಸರ್ಕಾರ ಎಷ್ಟು ದಿವಸ ಇರುತ್ತದೆ ಎಂದು ಹೇಳಿ ಒಬ್ಬ ಐ ಎ ಎಸ್ ಅಧಿಕಾರಿ ಕೇಳಿದರು. ಹಾಗೆ ಯಾರು ಕೇಳಿದವರು ಅವನನ್ನು ಪತ್ತೆ ಮಾಡಿ. ಅವನನ್ನು ನೇಣು ಹಾಕೋಣ ಎನ್ನತಕ್ಕಂಥ ಮಾತನ್ನು ಹೇಳಿದರು. ಈ ಹಿಂದೆ ನಿಮಗೆ ಅಭಿವೃದ್ಧಿ ಕೆಲಸ ರಿವ್ಯೂ ಮಾಡುವುದಕ್ಕೆ ಪುರಸೊತ್ತು ಇರಲಿಲ್ಲ. ಇವತ್ತು ಮಾರ್ಚಿ ಕೊನೆ ಎಂದು ತಿಳಿದುಕೊಂಡು ಇವತ್ತು ನೀವು ರಿವ್ಯೂ ಮಾಡಿದರೆ ಒದಗಿಸಿದಂತಹ ಹಣ ಖರ್ಚು ಮಾಡುವುದಕ್ಕೆ ಹೇಗೆ ಸಾಧ್ಯ ಇದೆ. ನೀವು ಕೇವಲ ಹಣವನ್ನು ಬಿಡುಗಡೆ ಮಾಡುತ್ತೇವೆ ಎನ್ನಬಹುದೇ ಹೊರತಾಗಿ ಅದೆಲ್ಲವೂ ಲ್ಯಾಪ್ಸ್ ಆಗುತ್ತದೆ. ಯಾವುದಾದರೂ ಡೆಪ್ಯುಟಿ ಕಮೀಷನರ್‌ರವರ ಹತ್ತಿರ ಪಿಡಿ ಅಕೌಂಟ್ ಇದ್ದರೆ ಅದು ಉಳಿಯಬಹುದೇ ಹೊರತು ಸಣ್ಣ ಮತ್ತು ಭಾರೀ ನೀರಾವರಿ ಯೋಜನೆಗಳು, ವೆಲ್‌ಫೇರ್ ಸ್ಕೀಮ್ಸ್ ಶಿಕ್ಷಣ ಇಲಾಖೆ ಇತ್ಯಾದಿಗಳಿಗೆ ಕೊಡುವ ಹಣ ಲ್ಯಾಪ್ಸಾಗಿ ಹೋಗುತ್ತದೆ. ಮತ್ತು ಆ ಅಭಿವೃದ್ಧಿ ಕೆಲಸಗಳಾಗುವುದಕ್ಕೆ ಸಾಧ್ಯವೇ ಇಲ್ಲ. ಉದಾಹರಣೆಗೆ ಹೇಳುತ್ತೇನೆ, 1997-98ನೇ ಸಾಲಿಗೆ ಸೇಲ್ಸ್ ಟ್ಯಾಕ್ಸ್‌ನಲ್ಲಿ ನೀವು ಕೊಟ್ಟಗುರಿ ಅಂದಾಜು 4,373 ಕೋಟಿ ರೂಪಾಯಿ ಇವತ್ತು ತಾವು ಇದರಲ್ಲಿ ಎಷ್ಟು ಕಲೆಕ್ಟ್ ಮಾಡಿದ್ದೀರಿ ಎಂದರೆ, ವಿಧಾನ ಪರಿಷತ್ತಿನಲ್ಲಿ ಶಂಕರಮೂರ್ತಿಯವರಿಗೆ ಕೊಟ್ಟ ಉತ್ತರದಲ್ಲಿ ಹೇಳಿದ್ದೀರಿ, ಫೆಬ್ರವರಿ ಕೊನೆಯವರೆಗೆ ಕೇವಲ 3,360 ಕೋಟಿ ರೂಪಾಯಿ ಕಲೆಕ್ಟ್ ಆಗಿದೆ ಎಂದು. ಅಂದರೆ 1012 ಕೋಟಿ ರೂಪಾಯಿ ಖೋತಾ ಆಗಿದೆ. ಮಾರ್ಚ್‌ನ 20 ದಿವಸಗಳ ಮಾಹಿತಿ ನನ್ನಹತ್ತಿರ ಇಲ್ಲ. ಇದು ವಿಧಾನ ಪರಿಷತ್ತಿನಲ್ಲಿ ನೀವೇ ಹೇಳಿರತಕ್ಕಂಥ ಉತ್ತರ. ತಾವು ಇದನ್ನು ಸದನಕ್ಕೆ ಒದಗಿಸಿರುವುದರಿಂದ ಇದು ಸರಿಯಾಗಿದೆ ಮತ್ತು ಇದು ಅಥೆಂಟಿಕ್ ಸ್ಟಾಟಿಸ್ಟಿಕ್ಸ್ ಎಂದು ನಾನು ತಿಳಿದುಕೊಂಡಿದ್ದೇನೆ. ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್‌ನಲ್ಲಿ ತಮ್ಮ ಟಾರ್ಗೆಟ್ 43 ಕೋಟಿ ರೂಪಾಯಿಗಳಾಗಿದ್ದರೆ ಅದರಲ್ಲಿನ ಖೋತಾ 15 ಕೋಟಿ ರೂಪಾಯಿ. ಇನ್ನೂ 15 ಕೋಟಿ ರೂಪಾಯಿಗಳನ್ನು ತಾವು ಕಲೆಕ್ಟ್ ಮಾಡಬೇಕಾಗಿದೆ. ಪ್ರೊಫೆಷನಲ್ ಟಾಕ್ಸ್‌ನಲ್ಲಿ ತಾವು 140 ಕೋಟಿ ರೂಪಾಯಿ ಕಲೆಕ್ಟ್ ಮಾಡುತ್ತೇವೆ ಎಂದು ಹೇಳಿದ್ದೀರಿ. ಅದರಲ್ಲಿ

ಇನ್ನೂ 50 ಕೋಟಿ ರೂಪಾಯಿ ಖೋತಾ ಇದೆ. ಎಂಟರ್‌ಟೈನಮೆಂಟ್ ಟ್ಯಾಕ್ಸ್‌ನಲ್ಲಿ ಮಾತ್ರ 10 ಕೋಟಿ ರೂಪಾಯಿ ಜಾಸ್ತಿ ಬಂದಿದೆ. ಬೆಟ್ಟಿಂಗ್ ಟ್ಯಾಕ್ಸ್‌ನಲ್ಲಿ ಮಾತ್ರ 10 ಕೋಟಿ ರೂಪಾಯಿ ಜಾಸ್ತಿ ಬಂದಿದೆ. ಬೆಟ್ಟಿಂಗ್ ಟ್ಯಾಕ್ಸ್‌ನಲ್ಲಿ 16 ಕೋಟಿ ರೂಪಾಯಿ ತಮ್ಮ ಗುರಿ ಎಂದು ಹೇಳಿದ್ದಿರಿ, ಅದರಲ್ಲೂ ಸಹ 8 ಕೋಟಿ ರೂಪಾಯಿಗಳ ಖೋತಾ ಇದೆ. ಲಕ್ಸರಿ ಟ್ಯಾಕ್ಸ್ ಮತ್ತು ಎಂಟ್ರಿ ಟ್ಯಾಕ್ಸ್‌ನಲ್ಲಿ 2 ಕೋಟಿ ರೂಪಾಯಿ ಜಾಸ್ತಿ ಬಂದಿದೆ. ಎಕ್ಸೈಸ್‌ನಲ್ಲಿ ತಮ್ಮ ಗುರಿ 946 ಕೋಟಿ ರೂಪಾಯಿಗಳಾದರೆ ತಾವು ಕಲೆಕ್ಟ್ ಮಾಡಿದ್ದು ಕೇವಲ 737 ಕೋಟಿ. ಅಂದರೆ ಇದರಲ್ಲಿ 208 ಕೋಟಿ ರೂಪಾಯಿ ಖೋತಾ ಆಗಿದೆ. ಮೋಟಾರ್ ವೆಹಿಕಲ್ ಟ್ಯಾಕ್ಸ್‌ನಲ್ಲಿ ತಮ್ಮ ಗುರಿ 480 ಕೋಟಿ ರೂಪಾಯಿಗಳಾದರೆ, ತಾವು ಕಲೆಕ್ಟ್ ಮಾಡಿದ್ದು 370 ಕೋಟಿ ರೂಪಾಯಿ, ಇನ್ನೂ 110 ಕೋಟಿ ರೂಪಾಯಿ ಕಲೆಕ್ಟ್ ಆಗಬೇಕಾಗಿದೆ. ಸ್ಟ್ಯಾಂಪ್ಸ್ ಅಂಡ್ ರಿಜಿಸ್ಟ್ರೇಷನ್‌ನಲ್ಲಿ ತಮ್ಮ ಗುರಿ ಇರತಕ್ಕಂಥಾದ್ದು 650 ಕೋಟಿ ರೂಪಾಯಿ. ಆದರೆ ತಾವು ಕಲೆಕ್ಟ್ ಮಾಡಿದ್ದು 464 ಕೋಟಿ ರೂಪಾಯಿ. ದಿನಾಂಕ 28-2-98 ರಂದು ತಾವು ಚುಕ್ಕೆ ಗುರುತಿನ ಸಂಖ್ಯೆ 171ಕ್ಕೆ ಉತ್ತರದಲ್ಲಿ ಕೊಟ್ಟಂಥ ಮಾಹಿತಿಗಳಿವು. ಸೇಲ್ಸ್ ಟ್ಯಾಕ್ಸ್, ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್, ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಇವುಗಳ ಬಗ್ಗೆ ಉತ್ತರದಲ್ಲಿ ಹೇಳಿದ್ದೀರಿ. ಆದರೆ ಎಕ್ಸ್‌ಸೈಸ್ ಡಿಪಾರ್ಟ್‌ಮೆಂಟಿನ ಮಾಹಿತಿಯನ್ನು ನಾವು ಕಲೆಕ್ಟ್ ಮಾಡಿದ್ದು. ಆ ಮಾಡಿದ್ದು. ಆ ಮಾಹಿತಿ ಪ್ರಕಾರ ಹೇಳುತ್ತಿದ್ದೇನೆ, ಸ್ಟ್ಯಾಂಪ್ಸ್ ಅಂಡ್ ರಿಜಿಸ್ಟ್ರೇಷನ್‌ನಲ್ಲಿ ತಮ್ಮ ಗುರಿ 650 ಕೋಟಿ ರೂಪಾಯಿಗಳಿದ್ದರೆ, 464 ಕೋಟಿ ರೂಪಾಯಿಗಳನ್ನು ಮಾತ್ರ ಕಲೆಕ್ಟ್ ಮಾಡಿದ್ದೀರಿ. ಎಲೆಕ್ಟ್ರೀಸಿಟಿ ಡ್ಯೂಸ್ ಎಷ್ಟಿದೆ ಎಂದರೆ, ಕಲೆಕ್ಟ್ ಮಾಡಬೇಕಾಗಿರತಕ್ಕಂಥಾದ್ದು 151 ಕೋಟಿ ರೂಪಾಯಿಗಳಾಗಿದ್ದು, ಆದರಲ್ಲಿ ತಾವು ಕಲೆಕ್ಟ್ ಮಾಡಿರುವುದು ಕೇವಲ 80 ಕೋಟಿ, ಅಂದರೆ ಸುಮಾರು 71 ಕೋಟಿ ರೂಪಾಯಿ ಖೋತಾ ಆಗಿದೆ. ಲ್ಯಾಂಡ್ ರೆವಿನ್ಯೂದು ಸಣ್ಣ ಮೊತ್ತವಾಗಿದ್ದು ಕೇವಲ 30 ಕೋಟಿ ರೂಪಾಯಿ ಇದೆ. ಅಂದರೆ ಕಲೆಕ್ಟ್ ಮಾಡಬೇಕಾಗಿರತಕ್ಕಂಥ ಒಟ್ಟು ಟಾರ್ಗೆಟ್ 7112 ಕೋಟಿ ರೂಪಾಯಿ. ಇದರಲ್ಲಿ ತಾವು ಕಲೆಕ್ಟ್ ಮಾಡಿದ್ದು 5,470 ಕೋಟಿ ರೂಪಾಯಿ ಮಾತ್ರ. ಅಂದರೆ 1,662 ಕೋಟಿ ರೂಪಾಯಿ ಇವತ್ತು ಖೋತಾ ಆಗಿದೆ.

ಉಪಾಧ್ಯಕ್ಷರು:- ಮಾರ್ಚ್ ತಿಂಗಳಲ್ಲಿ ಕಲೆಕ್ಟ್ ಆಗುವಂಥಾದ್ದನ್ನೂ ಆದಕ್ಕೆ ಸೇರಿಸಬೇಕು ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾರ್ಚನ 20 ದಿವಸದ್ದನ್ನು ಬಿಟ್ಟು ಹೇಳುತ್ತಿದ್ದೇನೆ ಇಲ್ಲಿಯವರಿಗೆ ಇರತಕ್ಕಂಥಾದ್ದನ್ನು ನಾವು ಮಾತನಾಡಬೇಕಲ್ಲಾ. ನೀವು 20 ದಿವಸಗಳಲ್ಲ 1,600 ಕೋಟಿ ರೂಪಾಯಿ ಕಲೆಕ್ಟ್ ಮಾಡುತ್ತೇವೆ ಎಂದರೆ ಸರಿ ಅದನ್ನೂ ನೋಡೋಣ. 27ನೇ ತಾರೀಖು ಲೇಟೆಸ್ಟ್ ಫಿಗರ್ಸ್‌ಗಳನ್ನು ತೆಗೆದುಕೊಂಡು ತಾವೇ ಉತ್ತರ ಕೊಡುತ್ತೀರಲ್ಲಾ. ಆಗ ಗೊತ್ತಾಗುತ್ತದೆ. ನಾನು ಏಕೆ ಈ ಮಾತುಗಳನ್ನು ಹೇಳುತ್ತಿದ್ದೇನೆ ಎಂದರೆ, 1,260 ಕೋಟಿ ರೂಪಾಯಿಗಳಲ್ಲದೆ, ನಮಗೆ ಬಾಂಡ್ ಮುಖಾಂತರ ಬರತಕ್ಕಂಥಾದ್ದರಲ್ಲಿ ನಮ್ಮ ಅಪೇಕ್ಷೆಗಿಂತಲೂ 400 ಕೋಟಿ ರೂಪಾಯಿ ಖೋತಾ ಆಗಿದೆ. ಅದೇ ರೀತಿಯಾಗಿ ನಾವು ಕೇಂದ್ರ ಸರ್ಕಾರದಿಂದ ವಾಲೆಂಟರಿ ಡಿಸ್‌ಕ್ಲೋಷರ್ ಆಫ್ ಇನ್‌ಕಂ ಸ್ಕೀಂ (ವಿಡಿಐ ಎಸ್)ನ ಕೆಳಗೆ ಏನು ಅಪೇಕ್ಷೆ ಪಟ್ಟಿದ್ದೆವೋ, ಇನ್ನೂ ಅದು ಬಂದಿಲ್ಲ. ಹಾಗಾಗಿ ಹೆಚ್ಚು ಕಡಿಮೆ ಸುಮಾರು 2,00 ಕೋಟಿ ರೂಪಾಯಿಗಳವರೆಗೆ ಖೋತಾ ತಲುಪುತ್ತೇವೆ.

ಶ್ರೀ ಸಿದ್ಧರಾಮಯ್ಯ: ವಿಡಿಐಎಸ್ ಗೂ ಇದಕ್ಕೂ ಏನೂ ಸಂಬಂಧವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಇದುನೀವು ಉತ್ತರದಲ್ಲಿ ಹೇಳಿದ್ದು. ಅದರಲ್ಲಿ ಇವೆಲ್ಲವೂ ಬರುತ್ತದೆ. ಆಗಲಿ, ಅದನ್ನೂ ಬಿಟ್ಟು ಬಿಡೋಣ. ಅದನ್ನು ಬಿಟ್ಟರೂ ಸಹ, ನಿಮ್ಮ ಮಾಹಿತಿ ಪ್ರಕಾರವೇ 2,000 ಕೋಟಿ ರೂಪಾಯಿ ಖೋತಾ ಎಂದು ತಿಳಿದುಕೊಳ್ಳೋಣ. ಇವತ್ತು 2,000 ಕೋಟಿ ರೂಪಾಯಿ ನಮ್ಮಲ್ಲಿ ಇಲ್ಲವೇ ಹೋದುದರಿಂದ ಆಷ್ಟೊಂದು ಅಭಿವೃದ್ಧಿ ಕೆಲಸಗಳನ್ನು ನಾವು ಕುಂಠಿತಗೊಳಿಸಿದ್ದೇವೆಯೇ, ಇಲ್ಲವೇ ಎನ್ನುವುದನ್ನು ನೀವೇ ಹೇಳಬೇಕಾಗುತ್ತದೆ. ಹೇಗೆ ಕುಂಠಿತಗೊಳಿಸಿದ್ದೀರಿ ಎನ್ನುವುದನ್ನು ನಾನು ಉದಾಹರಣೆಯನ್ನು ಕೂಡ ಕೊಡುತ್ತೇನೆ. ಇಷ್ಟೇ ಅಲ್ಲದೆ, ಹಿಂದೆ ತಾವು ಪ್ರತಿಯೊಂದು ಪ್ಲಾನ್ ಸ್ಕೀಂನಲ್ಲಿ ರಿಸೋರ್ಸಸ್ ಅನ್ನು ಒಳ್ಳೆಯ ರೀತಿಯಲ್ಲಿ ಮೊಬಿಲೈಸ್ ಮಾಡಿದ್ದೇವೆ ಎಂದು ಹೇಳಿದಿರಿ. ಅದಕ್ಕೆ ನಾನು 1994-95ರಲ್ಲಿ ಅಪ್ರೂವ್ಡ್ ಔಟ್‌ಲೇ ಎಷ್ಟಿತ್ತು? ನಂತರ ಅದರಲ್ಲಿ ಶಾರ್ಟ್ ಫಾಲ್ ಎಷ್ಟಾಯಿತು ಎನ್ನುವುದನ್ನು ಹೇಳಿದ್ದೇನೆ. ಎಂಟನೇ ಪಂಚವಾರ್ಷಿಕ ಯೋಜನೆಯ 3-4 ವರ್ಷಗಳಲ್ಲೇ ಹೆಚ್ಚು ಕಡಿಮೆ ಸುಮಾರು 2,000 ಕೋಟಿ ರೂಪಾಯಿಗಳಷ್ಟು ಪ್ಲಾನ್ ಔಟ್‌ಲೇಯಲ್ಲಿ ಕಡಿಮೆಯಾಗಿದೆ. ಉದಾಹರಣೆಗೆ ಹೇಳುತ್ತೇನೆ, 1994-95ರಲ್ಲಿ 3,275 ಕೋಟಿ ರೂಪಾಯಿ ಪ್ಲಾನ್ ಔಟ್‌ಲೇ ಇತ್ತು, ಅದನ್ನು 2,800 ಕೋಟಿ ರೂಪಾಯಿಗಳಿಗೆ ರಿವೈಸ್ ಮಾಡಿದಿರಿ. ಆಗ 448 ಕೋಟಿ ರೂಪಾಯಿ ಶಾರ್ಟ್‌ಫಾಲ್ ಆಯಿತು. 1995-96ರಲ್ಲಿ 3,575 ಕೋಟಿ ರೂಪಾಯಿಗಳಿದ್ದು, ಅದನ್ನು 3,100 ಕೋಟಿ ರೂಪಾಯಿಗಳಿಗೆ ರಿವೈಸ್ ಮಾಡಿದಿರಿ. ಅಂದರೆ 475 ಕೋಟಿ ರೂಪಾಯಿ ಶಾರ್ಟ್‌ಫಾಲ್ ಆಯಿತು. 1996-97ರಲ್ಲಿ 4,360 ಕೋಟಿ ರೂಪಾಯಿಗಳಿದ್ದು, ತಾವು ರಿವೈಸ್ ಮಾಡಿದ್ದು 3,700 ಕೋಟಿ ರೂಪಾಯಿಗಳಿಗೆ. ಈಗ 1997-98ರಲ್ಲಿ, 4,545 ಕೋಟಿ ರೂಪಾಯಿ ಇದ್ದದ್ದನ್ನು ಹತ್ತಿರ ಹತ್ತಿರ 400 ಕೋಟಿ ರೂಪಾಯಿ ಕಡಿಮೆ ರಿವೈಸ್ ಮಾಡುತ್ತಿದ್ದೀರಿ. ಇವೆಲ್ಲಾ ಸೇರಿಸಿದರೆ ಇವತ್ತು 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಸುಮರು 2,000 ಕೋಟಿ ರೂಪಾಯಿ ಖೋತಾ ಆಗುತ್ತದೆ. ನಾವು ಲೆಕ್ಕ ಮಾಡಿದ ಪ್ರಕಾರ ಪ್ಲಾನ್ ಔಟ್‌ಲೇಯಲ್ಲಿ 1,800 ಕೋಟಿ ರೂಪಾಯಿ ಖೋತಾ ಆಗುತ್ತದೆ. ಇಷ್ಟು ಕಡಿತ ಆಗಬೇಕು ಎಂದರೆ ನೀವು ರಿಸೋರ್ಸ್ ಮೊಬಿಲೈಸೇಷನ್ ಮಾಡುವಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೀರಿ. ಆದರಿಂದಲೇ ಇವತ್ತು 1,800 ಕೋಟಿ ರೂಪಾಯಿ ಖೋತಾ ಆಗಿದೆ. ಇದೇ ಅಲ್ಲದೆ, ಕೈಗಾರಿಕೆಗಳ ಬಗ್ಗೆ ಹೇಳಬೇಕಾದರೆ, ನಮ್ಮಲಿರುವಂಥ ಸ್ಟೇಟ್ ಪಬ್ಲಿಕ್ ಅಂಡರ್‌ಟೇಕಿಂಗ್‌ಗಳನ್ನು ಮಲಗಿಸಿಯೇ ಬಿಟ್ಟಿದ್ದಾರೆ, ಹೇಗೆಂದರೆ, ಇರತಕ್ಕಂಥ 76 ಸ್ಟೇಟ್ ಪಬ್ಲಿಕ್ ಅಂಡರ್‌ಟೇಕಿಂಗ್‌ಗಳಲ್ಲಿ 44 ಇವತ್ತು ನಷ್ಟದಲ್ಲಿವೆ. ಅವುಗಳಿಂದ ಎಸ್ಟಿಮೇಟೆಡ್ ಲಾಸ್ ಸುಮಾರು 994 ಕೋಟಿ ರೂಪಾಯಿ. ಕೆಲವು ಕೈಗಾರಿಕೆಗಳನ್ನು ಹತ್ತಾರು ವರ್ಷಗಳಿಂದ ನೋಡುತ್ತಿದ್ದೇವೆ, ಇವು ಕಳೆದ ಮೂರು ವರ್ಷಗಳಲ್ಲಿ ಕೊಲ್ಯಾಪ್ಸ್ ಆಗಿವೆ. ಏಕೆಂದರೆ ಪಬ್ಲಿಕ್ ಅಂಡರ್‌ಟೇಕಿಂಗ್‌ಗಳನ್ನು ನಾವುರಕ್ಷಣೆ ಮಾಡದೇ ಹೋದರೆ ನಾಳೆ ಖಂಡಿತವಾಗಿ ಒಂದು ದೊಡ್ಡ ಅನಾಹುತವಾಗುತ್ತದೆ. ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇವತ್ತು ಎಲ್ಲರೂ ಲಿಬರಲೈಸೇಷನ್ ಪಾಲಿಸಿ ತತ್ವದ ಆಧಾರದ ಮೇಲೆ ಪ್ರೈವೇಟೈಸೇಷನ್ ಮಾಡಿ ಎಂದು ಹೇಳುತ್ತಾರೆ. ಉದಾಹರಣೆಗೆ, ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಅನ್ನು ಪ್ರೈವಟೈಸ್ ಮಾಡಿ ಎಂದರೆ ಒಪ್ಪಿಕೊಳ್ಳಬಹುದು. ಆದರೆ ಕೆಲವು ಅಗತ್ಯ ಸೇವೆಗಳನ್ನು ಅಂದರೆ ಕೆಎಸ್ ಆರ್ ಟಿಸಿ ಅಥವಾ ಆಸ್ಪತ್ರೆಗಳನ್ನು ಪ್ರೈವೇಟೈಸ್ ಮಾಡಲು ಆಗುತ್ತದೆಯೇ? ಎಲ್ಲಾ ಶೈಕ್ಷಣಿಕ ಸಂಸ್ಥೆಗಳನ್ನು ಪ್ರೈವೇಟೈಸ್ ಮಾಡುವುದಕ್ಕಾಗುತ್ತದೆಯೇ? ನಾವು ಹೊಸ ಕೈಗಾರಿಕೆಗಳನ್ನು ಮಾಡುವುದು ಬೇಡ. ಇರುವುದನ್ನಾದರೂ ರಕ್ಷಣೆ ಮಾಡಬೇಕಲ್ಲವೇ? ಇವತ್ತು ಇರುವುದನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೆ ಆಗುತ್ತಿಲ್ಲ. ಇವತ್ತು ಎನ್ ಜಿ ಎಫ್ ಏನಾಗಿದೆ ಎಂದರೆ ಆ ಕಡೆ ಒಬ್ಬರಿಗೂ ಗಮನವೇ ಇಲ್ಲ.

12.40 ಪಿ.ಎಂ.

ಮಾನ್ಯ ದೇಶಪಾಂಡೆಯವರು ಮೂರು ವರ್ಷದಿಂದ ಸರ್ಕಾರದಿಂದ ಅದು ಮಾಡುತ್ತೇವೆ, ಇದು ಮಾಡುತ್ತೇವೆ ಎಂದು ಹೇಳುತ್ತಿದ್ದರು. ಆದರೆ ಇವತ್ತು ಅವರೇ ಪುನ: ಈ ಸರ್ಕಾರ ಸರಿಯಿಲ್ಲ, ಉಪಯೋಗ ಇಲ್ಲ, ಯಾವ ಕೆಲಸವೂ ಕೂಡ ಸರ್ಕಾರದಿಂದ ಈಗ ಆಗುತ್ತಾ ಇಲ್ಲ ಎಂದು ಹೇಳುತ್ತಿದ್ದಾರೆ. ಈ ನಷ್ಟದಲ್ಲಿರುವ ಉದ್ದಿಮೆಗಳನ್ನು ಸುಧಾರಣೆ ಮಾಡಬೇಕು ಎಂದುಯಾವ ರೀತಿಯ ಕಾರ್ಯಕ್ರಮವನ್ನು ನೀವು ಹಾಕಿಕೊಂಡಿಲ್ಲ. ತಲೆ ನೋಯುತ್ತಿದೆ ಎಂದು ತಲೆಯನ್ನೇ ಕಡಿದುಕೊಳ್ಳಲು ಆಗುವುದಿಲ್ಲ. ಅದಕ್ಕೆ ಔಷಧಿಯನ್ನು ಕಂಡುಹಿಡಿಯಬೇಕು. ಹಾಗೆ ಕೆಲವು ಕೈಗಾರಿಕೆಗಳು ನಷ್ಟದಲ್ಲಿ ನಡೆಯುತ್ತಿವೆ ಎಂದು ಅವುಗಳನ್ನು ಕಡೆಗಣಿಸಲಾಗುವುದಿಲ್ಲ. ಅನೇಕ ಖಾಸಗಿ ಕೈಗಾರಿಕೆಗಳು ಸರಿಯಾಗಿ ನಡೆಯುತ್ತಿವೆ. ಎಂದು ಅವುಗಳನ್ನು ಕಡೆಗಣಿಸಲಾಗುವುದಿಲ್ಲ. ಅನೇಕ ಖಾಸಗಿ ಕೈಗಾರಿಕೆಗಳು ಸರಿಯಾಗಿ ನಡೆಯುತ್ತಿವೆ, ಏಕೆಂದರೆ ಅವರು ಒಳ್ಳೆಯ ತಾಂತ್ರಿಕತೆಯನ್ನು ಉಪಯೋಗಿಸಿಕೊಂಡು ಉದ್ಯಮಗಳನ್ನು ನಡೆಸುತ್ತಾರೆ, ನೀವು ಒಳ್ಳೆಯ ತಾಂತ್ರಿಕ ಪ್ರವೀಣರನ್ನು ಉಪಯೋಗಿಸಿಕೊಂಡು, ಒಳ್ಳೆಯ ಉದ್ಯಮಗಳಲ್ಲಿ ಅನುಭವ ಹೊಂದಿದವರನ್ನು ಇಲ್ಲಿ ನೇಮಕಮಾಡಿಕೊಳ್ಳಬೇಕು. ಹತ್ತಾರು ವರ್ಷಗಳಿಂದ ಸರಿಯಾಗಿ ನಡೆಯುತ್ತಿದ್ದು, ಈ ಏಳು - ಎಂಟು ತಿಂಗಳಲ್ಲಿ ನಷ್ಟದಲ್ಲಿ ನಡೆಯಲಿ ಏನು ಕಾರಣ. ಕೆಲವು ಸಲ ಕೆಲವು ಕೈಗಾರಿಕೆಗಳು ನಷ್ಟದಲ್ಲಿ ಇರಬಹುದು, ಕೆಲವು ಉದ್ದಿಮೆಗಳು ಪ್ರಾರಂಭದಿಂದ ಇಂದಿನವರಿಗೂ ನಷ್ಟದಲ್ಲಿ ಇರಬಹುದು, ಕೆಲವು ಉದ್ದಿಮೆಗಳು ಪ್ರಾರಂಭದಿಂದ ಇಂದಿನವರೆಗೂ ನಷ್ಟವನ್ನೇ ಅನುಭವಿಸುತ್ತಿವೆ, ಅದಕ್ಕಾಗಿ ಎಲ್ಲಾ ಕೈಗಾರಿಕೆಗಳನ್ನು ಬಂಧ ಮಾಡುತ್ತೇವೆ ಎಂದರೆ ಹೇಗೆ? ಪಟ್ಟ ಭದ್ರ ಹಿತಾಸಕ್ತಿಗಳು ಎಲ್ಲಾ ಕಡೆಯಲ್ಲೂ ಇವೆ, ನೀವು ರೈಟ್ ಆಫ್ ಮಾಡಿ ಬಿಟ್ಟು ಬಿಟ್ಟರೆ ಹೇಗೆ?

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) :- ಮಾನ್ಯ ಉಪಾಧ್ಯಕ್ಷರೆ, 76 ಸಾರ್ವಜನಿಕ ಉದ್ದಿಮೆಗಳಿಗೆ 9 ಸಾವಿರ 100 ಕೋಟಿ ರೂ. ಬಂಡವಾಳದಲ್ಲಿ 4 ಸಾವಿರ ಕೋಟಿ ರೂ.ಗಳನ್ನು ಸಾಲ ತೆಗೆದುಕೊಂಡು ಹಾಕಿದ್ದೇವೆ. ಈ ಸಾಲ ಮೇಲೆ ಶೇ 13 ರಿಂದ 15 ರಷ್ಟು ಬಡ್ಡಿಯನ್ನು ಕೊಡುತ್ತೇವೆ. ರಾಜ್ಯದಲ್ಲಿ ಇನ್ನು ಬೇರೆ - ಬೇರೆ ಕೆಲಸಗಳನ್ನು ಸರ್ಕಾರ ಮಾಡಬೇಕು. We have to consider about the return that we are getting from them. ಅದು ಇವರ ಕಾಲದಲ್ಲಿ, ಆಗಿದೆ, ಅವರ ಕಾಲದಲ್ಲಿ ಆಗಿದೆ ಎಂದು ಯೋಚನೆ ಮಾಡದೆ, ವಸ್ತುಸ್ಥಿತಿಯನ್ನು ನೋಡಿಮಾಡಬೇಕಾಗುತ್ತದೆ. ನಮ್ಮ ದೇಶದಲ್ಲಿ ಆರ್ಥಿಕ ಉದ್ಯಾರೀಕರಣ ನೀತಿ ಜಾರಿಗೆ ಬಂದ ಮೇಲೆ ಖಾಸಗಿಯವರ ಜೊತೆ ಸ್ಪರ್ಧೆ ಮಾಡಲು ಆಗುವುದಿಲ್ಲ. ಯಾವುದೇ ಕಾಲದ ಫಿಲಾಸಫಿಯನ್ನು ಇಟ್ಟುಕೊಂಡು ಇವುಗಳನ್ನು ಮುಂದುವರಿಸಿಕೊಂಡು ಹೋಗಲು ಆಗುವುದಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹಣಕಾಸಿನ ಮಂತ್ರಿಗಳು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ, ಆದರೆ ಈ ರೀತಿ ಸತತ ನಷ್ಟವನ್ನು ಅನುಭವಿಸಲು ಕಾರಣ ಏನು ಮತ್ತು ಆ ಕಾರಣವನ್ನು ಹಾಗೆ ಮುಂದುವರೆಸಿಕೊಂಡು ಹೋಗಲು ಕಾರಣವೇನು? ಉದಾಹರಣೆಗೆ ಎಂಇಐ ಕಾರ್ಖಾನೆ ಈಗ ನಷ್ಟದಲ್ಲಿ ಇರಲು ಕಾರಣ ಏನು ಎಂಬುದು ನಮಗೆ ಗೊತ್ತಿದೆ. ಆದರೆ ಆ ಕಾರಣವನ್ನು ಹಾಗೆಯೇ ಮುಂದುವರೆಸಿಕೊಂಡು ಹೋಗುವುದು ಸರಿಯಲ್ಲ.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) :- ಮಾನ್ಯ ಉಪಾಧ್ಯಕ್ಷರೆ, 9 ಸಾವಿರ 100 ಕೋಟಿ ರೂ.ಗಳಷ್ಟು ಬಂಡವಾಳವನ್ನು ಹೂಡಿದ ಉದ್ದಿಮೆಗಳಿಂದ ಪ್ರತಿಫಲ ಏನು ಬರುತ್ತಿದೆ ಎಂದು ನೋಡಬೇಕಾಗುತ್ತದೆ. ಆದರೆ ಕೆಲವು ಅತಿ ಅವಶ್ಯಕವಾದ ಸಾರ್ವಜನಿಕ ಸೇವೆಯನ್ನು ನೀಡುತ್ತಿರುವ ಕೆಎಸ್ ಆರ್‌ಟಿಸಿ, ಮತ್ತು ಕೆಇಬಿಗಳನ್ನು ನಾವು ಜನಹಿತ ದೃಷ್ಟಿಯಿಂದ ಉಳಿಸಬೇಕಾಗುತ್ತದೆ, ಅವುಗಳನ್ನು ನಾವು ಸುಧಾರಣೆ ಮಾಡಬೇಕಾಗುತ್ತದೆ. ಅವುಗಳನ್ನು ಖಾಸಗೀಕರಣ ಮಾಡಲು ಹೋಗುವುದಿಲ್ಲ. ಇನ್ನು ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ ಫ್ಯಾಕ್ಟರಿ ಇದು ಕನಷ್ಯೂಮರ್ಸ್ ಗೂಡ್ಸ್ ಉತ್ಪಾದನೆ ಮಾಡುವಂತಹ ಘಟಕ ಇದು ಬೇರೆಯ ವಿಚಾರ.

(ಗೊಂದಲ)

ಇವುಗಳ ಇತಿಹಾಸ ಏನು ಎಂದು ನೋಡಬೇಕು. ಈ ಉದ್ದಿಮೆಗಳಿಗೆ 9 ಸಾವಿರ 100 ಕೋಟಿ ರೂ.ಗಳಲ್ಲಿ ನಾಲ್ಕು ಸಾವಿರ ಕೋಟಿ ರೂ.ಗಳನ್ನು ಸಾಲ ತೆಗೆದುಕೊಂಡು ಆ ಸಾಲಕ್ಕೆ 13 ರಿಂದ 15 ಶೇಕಡಾದಷ್ಟು ಬಡ್ಡಿಯನ್ನು ಈಗ ನಾವು ಕೊಡಬೇಕು. ಈ ರೀತಿಯ ಬಂಡವಾಳ ಹೂಡಿದ ಉದ್ದಿಮೆಗಳಿಂದ ಏನೂ ಪ್ರತಿಫಲ ಇಲ್ಲ ಎಂದ ಮೇಲೆ ಏಕೆ ಸರ್ಕಾರ ಬಡ್ಡಿಯನ್ನು ಕೊಡಬೇಕು?

(ಗೊಂದಲ)

ಶ್ರೀ ಚಂದ್ರಕಾಂತಬೆಲ್ಲದ :- ಈ ಉದ್ದಿಮೆಗಳನ್ನು ಸರಿಯಾಗಿ ನಡೆಸಬೇಕಾದರೆ ಸರ್ಕಾರಕ್ಕೆ ಆತ್ಮವಿಶ್ವಾಸ ಬೇಕಾಗುತ್ತದೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಮಾನ್ಯ ಉಪಾಧ್ಯಕ್ಷರೆ, ಎನ್‌ಜಿಇಎಫ್ ಬಹಳ ಪ್ರಸಿದ್ಧ ಪಡೆದ ಕಾರ್ಖಾನೆ, ಇದು ಜಗತ್ ಪ್ರಸಿದ್ಧಿಯಾದಂತಹ ಕಾರ್ಖಾನೆ, ಇಲ್ಲಿ ಉತ್ಪಾದನೆಯಾಗತಕ್ಕಂಹ ಗೂಡ್ಸ್ ಎಲ್ಲಾ ಕಡೆ, ಇಡೀ ರಾಷ್ಟ್ರ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯನ್ನು ಹೊಂದಿದೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪಾಧ್ಯಕ್ಷರೆ, ಸಾರ್ವಜನಿಕ ಉದ್ಯಮವಾದ ಎನ್‌ಜಿಇಎಫ್, ನಿಜಕ್ಕೂ ಜಗತ್ ಪ್ರಸಿದ್ಧಿ ಹೊಂದಿದ ದೊಡ್ಡ ಉದ್ದಿಮೆ. ಮತ್ತು ಮೈಸೂರ ಲ್ಯಾಂಪ್ಸ್ ಕಾರ್ಖಾನೆಗೆ 75 ವರ್ಷದ ಇತಿಹಾಸ ಇದೆ. ಅದನ್ನು ಖಾಸಗೀಕರಣ ಮಾಡುವಂತಹ ವ್ಯವಸ್ಥೆ ಆಗಬಾರದು. ಕರ್ನಾಟಕ ಸೋಪ್ಸ್ ಕಾರ್ಖಾನೆಯನ್ನು ಖಾಸಗಿಯವರಿಗೆ ಕೊಟ್ಟರೆ ಲಾಭದಲ್ಲಿ ನಡೆಸುತ್ತಾರೆ ಎಂದು ಹೇಳುತ್ತೀರೆ; ಆದರೆ ನೀವು ಏಕೆ ನಷ್ಟವನ್ನು ಅನುಭವಿಸುತ್ತೀರಿ?

ಉಪಾಧ್ಯಕ್ಷರು:- ನೀವು ಬಜೆಟ್ ಮೇಲೆ ಭಾಷಣ ಮಾಡುವಾಗ ಇದೆಲ್ಲವನ್ನು ಹೇಳಲು ಅವಕಾಶ ಇದೆ, ಆಗ ಎಲ್ಲವನ್ನೂ ಹೇಳಿ.

ಶ್ರೀ ವಾಟಾಳ್ ನಾಗರಾಜ :- ಮಾನ್ಯ ಉಪಮುಖ್ಯಮಂತ್ರಿಗಳು ಇದರ ಬಗ್ಗೆ ಹೇಳಲು ಪ್ರಾರಂಭಿಸಿದರು, ಅದಕ್ಕೆ ನಾನು ಹೇಳಬೇಕಾದ ಪ್ರಸಂಗ ಬಂತು.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಉಪಾಧ್ಯಕ್ಷರೆ, ಹಿಂದೆ ಸಾರ್ವಜನಿಕ ಉದ್ದಿಮೆಗಳನ್ನು ಏಕೆ ತಂದರು ಎಂದರೆ, ಇದು ಬರೀ ಲಾಭ-ನಷ್ಟದ ದೃಷ್ಟಿಯಿಂದಲ್ಲ. ಈ ರಾಜ್ಯದಲ್ಲಿ ಇರುವ ನಿರುದ್ಯೋಗ

ಸಮಸ್ಯೆಯನ್ನು ತೊಡೆದು ಹಾಕಿ, ಅವರಿಗೂ ಕೆಲಸವನ್ನು ಕೊಡಬೇಕು ಎನ್ನುವ ದೃಷ್ಟಿಕೋನವು ಇದೆ. ಲಾಭ-ನಷ್ಟದ ಜೊತೆಗೆ ಇವತ್ತು ಯಾರು ಡಿಪ್ಲೊಮೊ ಮಾಡಿದವರು, ಇಂಜಿನಿಯರಿಂಗ್ ಮಾಡಿದವರು ಇದ್ದಾರೆ ಅವರಿಗೆ ಅನುಕೂಲವಾಗಲಿ, ಉದ್ಯೋಗ ಸಿಗಲಿ ಎನ್ನುವ ದೃಷ್ಟಿಯಿಂದ ಹಿಂದೆ ಕೆಲವು ಕನ್‌ಫ್ಯೂಮರ್ ಗೂಡ್ಸ್ ಇಂಡಸ್ಟ್ರೀಗಳು ಬಂದಿರಬಹುದು, ಕೆಲವು ಪ್ರೊಡಕ್ಷನ್ ಓರಿಯಂಟೆಡ್ ಇಂಡಸ್ಟ್ರೀಗಳು ಬಂದಿರಬಹುದು. ಕೆಲವು ಅವಶ್ಯಕ ಸೇವೆಗಳನ್ನು ಮಾಡುವಂತಹ ಸಾರ್ವಜನಿಕ ಉದ್ದಿಮೆಗಳು ಇರಬಹುದು, ಆದರೆ ಎಲ್ಲವನ್ನೂ ಸಾರಾಸಗಟಾಗಿ ತೆಗೆದುಹಾಕುತ್ತೇವೆ, ಬಡ್ಡಿಯನ್ನು ಏಕೆ ಕೊಡಬೇಕು ಎಂದರೆ ಏನು ಅರ್ಥ? ಕೆಲವು ಸಾರಿ ಅದು ರಾಷ್ಟ್ರಕ್ಕೆ, ರಾಜ್ಯಕ್ಕೆ ಅದರ ಅವಶ್ಯಕತೆ ಇದ್ದರೆ ಜನತೆಯ ಹಿತದೃಷ್ಟಿಯಿಂದ ಬಡ್ಡಿಯನ್ನು ನೀಡಿ, ನಷ್ಟವಾದರೂ ಸಹಿಸಿಕೊಂಡು ಅಂತವುಗಳನ್ನು ಇಡಬೇಕಾಗುತ್ತದೆ, ಎಲ್ಲಕ್ಕೂ ಒಂದೇ ಔಷಧಿ ನಡೆಯುವುದಿಲ್ಲ, ಇದು ಜಿಂದಾತೀರಾಸ್ಮಿತ್ ಔಷಧಿಯೋ? ಎಲ್ಲಕ್ಕೂ ಉಪಯೋಗವಾಗಲು? ಹೊಟ್ಟೆನೋವು ಬಂದರೆ ಅದೇ, ತಲೆನೋವಿಗೂ ಅದೇ ಉಪಯೋಗ ಮಾಡುವಂತೆ ಇದನ್ನು ಮಾಡಿದರೆ ಆಗುವುದಿಲ್ಲ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ :- ಹಾಕಿದ ಬಂಡವಾಳವನ್ನು ಸರಿಯಾಗಿ ಉಪಯೋಗಿಸಿಕೊಂಡು ಲಾಭವನ್ನು ಮಾಡುವಂತೆ ಸರ್ಕಾರ ಆಡಳಿತ ಸರಿಯಾಗಿ ನಡೆಯಬೇಕು. ಇದರಿಂದ ಜನರಿಗೆ ಉದ್ಯೋಗ ಸಿಗಬೇಕು. ಆ ರೀತಿ ಒಳ್ಳೆಯ ಆಡಳಿತವನ್ನು ಸರ್ಕಾರ ಮಾಡಬೇಕು. ಇಲ್ಲಿ ಹಾಕಿದ ಬಂಡವಾಳ ನಷ್ಟವಾಗುತ್ತಿದೆ ಎನ್ನುವ ಪ್ರಶ್ನೆ ಬರುವುದಿಲ್ಲ. ಕೇಂದ್ರದಲ್ಲಿ ಸರ್ಕಾರ ಸಾರ್ವಜನಿಕ ಉದ್ದಿಮೆಗಳನ್ನು ಸರಿಯಾಗಿ ನಡೆಸಿಕೊಂಡು ಹೋಗಬೇಕೆಂದು ಯೋಜನೆಗಳನ್ನು ಹಾಕಿಕೊಂಡಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಉಪಾಧ್ಯಕ್ಷರೆ, ಈ ಮಾತು ಇಲ್ಲಿ ಏಕೆ ಬಂದಿದೆ ಎಂದರೆ, ಇದು ಬರಿ ಲಾಭ ನಷ್ಟದ ದೃಷ್ಟಿಯಲ್ಲ, ಲಾಭವನ್ನು ಮಾಡಿಕೊಳ್ಳಬೇಕು, ನೀವು ಪ್ರಯತ್ನಗಳನ್ನು ಮಾಡಬೇಕು, ಆ ದಿಕ್ಕಿನಲ್ಲಿ ನಮ್ಮ ಪ್ರಯತ್ನ ಇತ್ತು ಆದರೆ ನಾವು ಅದರಲ್ಲಿ ವಿಫಲರಾದೆವು ಎನ್ನುವುದು ನಮ್ಮಿಂದ ಬರಬೇಕು. ನಿಮ್ಮ ಕಮಿಡ್‌ಮೆಂಟ್ ಛೇಂಜ್ ಆಯಿತಾ? ನಿಮ್ಮ ನಂಬಿಕೆಯೂ ಬದಲಾವಣೆ ಆಯಿತಾ? ಅದನ್ನು ಇವತ್ತು ನಾನು ಹೇಳುತ್ತೇನೆ, ಕರ್ನಾಟಕ ರಾಜ್ಯದಲ್ಲಿ ಸುಮಾರು 17 ಲಕ್ಷ 50 ಸಾವಿರ ಎಜ್ಯುಕೇಟೆಡ್ ಅನ್ ಎಂಪ್ಲಾಯೀಸ್ ಇದ್ದಾರೆ. ಹೋದ ಸಾರಿ ಡಾ. ಮನಮೋಹನ್ ಸಿಂಗ್ ಇದ್ದಾಗ ತಮ್ಮ ಬಡ್ಜೆಟ್ ಬಗ್ಗೆ ಮಾತನಾಡುವಾಗ ಹೇಳಿದ್ದೇನೆ, ನಾನು ಅನೇಕ ಸಾರಿ ಕೆಲವು ವಿಷಯದಲ್ಲಿ ಒಪ್ಪುವುದಿಲ್ಲ. ಆದರೂ ಕೂಡ ತಮ್ಮ ಪ್ರಯತ್ನ ನಾವು ಬಿಡಬಾರದು. ಕಾರಣಾಂತರದಿಂದ, ಇದನ್ನು ಒಬ್ಬರು ಹೇಳಿದರೂ ಕೂಡ ನಮ್ಮ ಪ್ರಯತ್ನ ನಾವು ಬಿಡದೆ, ನಾವು ಯಾವ ದಿಕ್ಕಿನಲ್ಲಿ ಸಾಮಾಜಿಕ ನ್ಯಾಯವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೋ ಅದನ್ನು ನಾವು ಮಾಡಬೇಕಾಗುತ್ತದೆ. ಅದಕ್ಕೆ ನೀವು ಗಮನ ಹರಿಸಿ ಎಂದರೆ, ನಿಮ್ಮ ಮನಮೋಹನ್ ಸಿಂಗ್, ಹೀಗೆ ಅಂದರು, ನಿಮ್ಮ ಲಿಬರಲೈಸ್ ಪಾಲಿಸಿ ಬಂದಿತ್ತು ಎಂದುಹೇಳಿದರು, ನೀವು ಏನು ಮಾಡುವುದಕ್ಕಾಗುತ್ತದೆ ? ನೀವು ಬಂಡು ಏನು ಮಾಡುವುದು? ಎಲ್ಲಾ ನಾವು ಮಾಡಿದ್ದೇ ನೀವು ಮಾಡುವುದಾದರೆ ನೀವು ಏಕೆ ಬೇಕು? ಈ 17.50 ಲಕ್ಷ ಅನ್ ಎಂಪ್ಲಾಯೀಸ್ ಏನಿದ್ದಾರೆ ಇವರಿಗೆ ನಾವುಯಾವುದಾದರೂ ರೂಪದಲ್ಲಿ ಕೆಲಸ ಕೂಡ ಬೇಕಾಗುತ್ತದೆ. ಆ ದಿಕ್ಕಿನಲ್ಲಿ ನಾವು ಪ್ರಯತ್ನ ಮಾಡಬೇಕು. ಈ ಇಂಡಸ್ಟ್ರೀಸ್ ಬೇಡ, ಲುಕ್ಸಾನಾಯಿತು ಹೊಸ ಉದ್ಯೋಗಗಳೇನಾದರೂ ಬರಬೇಕು ಹೊಸದಾಗಿ ಕಾರ್ಖಾನೆಗಳು ಬರಬೇಕು, ಇವತ್ತು ಪ್ರೈವೇಟ್ ಇನ್‌ವೆಸ್ಟ್‌ಮೆಂಟ್ ಸುಮಾರು 5.4 ನೂರು ಕೋಟಿ ರೂಪಾಯಿಗಳ ಇನ್‌ವೆಸ್ಟ್‌ಮೆಂಟ್ ಬಂದಿದೆ

ಎಂದು ಹೇಳುತ್ತಿದ್ದೀರಿ, ಆದ್ದರಿಂದ ಇವತ್ತು ಈ 17 ಲಕ್ಷ ಜನರಲ್ಲಿ ಎಷ್ಟು ಜನರಿಗೆ ನೀವು ಕೆಲಸ ಕೊಡಬಹುದು, ಎಷ್ಟು ಡಿಪ್ಲೊಮಾ ಹೋಲ್ಡರ್ಸ್‌ಗೆ ಕೆಲಸ ಕೊಡತಕ್ಕಂತಹ ಸಾಧ್ಯತೆ ಇದೆ? ಎಷ್ಟು ಇಂಜಿನಿಯರ್‌ಗಳಿಗೆ ಇರತಕ್ಕಂತಹ ಸಾಧ್ಯತೆ ಇದೆ ಪೋಸ್ಟ್ ಗ್ರಾಜ್ಯುಯೇಟ್ಸ್, ಅನ್ ಎಂಪ್ಲಾಯೀಸ್ ಇರತಕ್ಕಂತಹವರು ಸುಮಾರು 15,034 ಜನ ಇದ್ದಾರೆ, ಗ್ರಾಜ್ಯುಯೇಟ್ಸ್ ಸುಮಾರು ಒಂದು ಲಕ್ಷ 64,00 ಜನ ಇದ್ದಾರೆ. ಡಿಪ್ಲೊಮಾ ಹೋಲ್ಡರ್ಸ್ ಸುಮಾರು 34,000 ಜನ ಇದ್ದಾರೆ. ಐ.ಟಿ.ಐ. ಪಾಸಾದವರು 52,000 ಜನ ಇವತ್ತು ಇದ್ದಾರೆ. ಮೆಟ್ರಿಕ್ ಪಾಸ್ ಆದವರು ಸುಮಾರು 11 ಲಕ್ಷ 21,000 ಜನ ನಿರುದ್ಯೋಗಿಗಳಿದ್ದಾರೆ. ಬಿಲೋ ಮೆಟ್ರಿಕ್ ಆದವರು ಸುಮಾರು 3.49 ಲಕ್ಷ ಜನ ಇದ್ದಾರೆ. ಇವೆಲ್ಲಾ ಸೇರಿ 17.50 ಲಕ್ಷ ನಿರುದ್ಯೋಗಿಗಳಿದ್ದಾರೆ. ಈ ಜನರಿಗೆ ನೀವು ಏನಾದರೂ ಕೆಲಸ ಕೊಡಬೇಕು. ಈ ನಿರುದ್ಯೋಗಿ ಯುವಕರೆಲ್ಲಾ ಲುಂಗಿ ಕಟ್ಟಿಕೊಂಡು ಕಟ್ಟೆ ಮೇಲೆ ಕೂತು ಮಾತನಾಡುವವರು ಆಗಿದ್ದಾರೆ. ನೀವು ಅನೇಕ ಸಾರಿ ಚುನಾವಣಾ ಪ್ರಚಾರಕ್ಕೆ ಹೋದಾಗ ಮತ್ತು ಫಂಕ್ಷನ್‌ಗಳಿಗೆ ಹೋದಾಗ ನೋಡಿರಬಹುದು. ಫಂಕ್ಷನ್‌ಗಳಿಗೆ ಹೋದಾಗ ಜಾಸ್ತಿ ನೋಡುವುದಿಲ್ಲ, ಆಗ ಏನಾಗುತ್ತದೆಂದರೆ, ಎಲ್ಲಿ ಫಂಕ್ಷನ್ ಇರುತ್ತದೆ ಅಲ್ಲಿಗೆ ನೇರವಾಗಿ ಹೋಗುತ್ತೀರಿ. ಆದರೆ ಚುನಾವಣೆಗೆ ಹೋದಾಗ ಗೊತ್ತಾಗುತ್ತದೆ. ಆ ಜನ ಕಟ್ಟೆ ಮೇಲೆ ಕೂತು ಮಾತನಾಡಿಕೊಂಡು, ಯಾವ ರೀತಿಯಲ್ಲಿ ಅವರ ಸ್ವಭಾನದಲ್ಲಿ ಬದಲಾವಣೆಯಾಗಿದೆ ಎಂದು ಗೊತ್ತಾಗುತ್ತದೆ. ಅದಕ್ಕೆ ಈ 17 ಲಕ್ಷ ನಿರುದ್ಯೋಗಿ ವಿದ್ಯಾರ್ಥಿಗಳೇನಿದ್ದಾರೆ, ಕಲಿತಂತಹವರು, ಕಲಿಯದೆ ಇರತಕ್ಕಂಥವರಾದರೆ ಅವರಿಗೆ ಅಗ್ರಿಕಲ್ಚರ್ ಲೇವರರ್ಸ್ ಆಗಿರುತ್ತಾರೆ. ಅವರಿಗೆ ಸೀಸನ್ ಇರುತ್ತದೆ. ಅವರಿಗೆ ನಾವು ಇರಿಗೇಷನ್ ಮಾಡುವವರಿಗೆ, ರಿಫಾರ್ಮ್ಸ್ ಮಾಡುವವರಿಗೆ ಅವರಿಗೆ ಎಷ್ಟರ ಮಟ್ಟಿಗೆ ನಾವು ಸಹಾಯ ಮಾಡುವುದಕ್ಕೆ ಆಗುತ್ತದೆ ಎಂಬ ಪ್ರಶ್ನೆ ಬೇರೆ. ಆದರೆ ಇವತ್ತು ವಿದ್ಯಾವಂತರಾದ ಈ 17.50 ಲಕ್ಷ ಜನರಿಗೆ ಇವೊತ್ತಿನ ಸ್ಥಿತಿಯಲ್ಲಿ ಎಂಪ್ಲಾಯ್‌ಮೆಂಟ್‌ನಲ್ಲಿ ಜನ ಏನಿದ್ದಾರೆ ಅವರಿಗೆ ಯಾವ ರೀತಿಯಾಗಿ ಸಹಾಯ ಮಾಡುತ್ತೀರಿ? ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ನೀವುಯಾವುದೇ ಕಾರ್ಯಕ್ರಮ, ಹಾಕಿಕೊಂಡಿದ್ದೀರಾ ಕೆಲವುಕಾರ್ಯಕ್ರಮ ನಾವುಹಾಕಿಕೊಂಡಿದ್ದೇವೆಂದು ಹೇಳುತ್ತೀರಿ, ಅದಕ್ಕೆ ನಾನು ಬರುತ್ತೇನೆ. ನೀವು ಹಾಕಿಕೊಂಡಿರುವ ಕಾರ್ಯಕ್ರಮಗಳು ಎಷ್ಟು ಫಲಕಾರಿಯಾಗಿವೆ, ಆದರೆ ಇದಕ್ಕಾಗಿ ನಾನು ಏನು ಹೇಳುತ್ತೇನೆ, ಕಾರ್ಖಾನೆಗಳು ಬರಬೇಕು. ಇವತ್ತು ಸ್ಕಿಲ್ಲ್ ಲೇಬರ್ ನಮ್ಮಲ್ಲಿ ಇಲ್ಲ. ಕೆಲವು ಕಡೆ ತೆಗೆದುಕೊಳ್ಳಬೇಕೆಂದು ಹೇಳುತ್ತೀರಿ, ನಾವುನೋಡಿದರೆ ಐಟಿಐ ಮತ್ತು ಡಿಪ್ಲೊಮಾ ಹೋಲ್ಡರ್ಸ್ ಸಂಖ್ಯೆ ನೋಡಿದರೆ ಸುಮಾರು ಹೆಚ್ಚು ಕಡಿಮೆ 55,000 ಇದೆ. 34,000 ಡಿಪ್ಲೊಮಾ ಹೋಲ್ಡರ್ಸ್ ಇದ್ದಾರೆ ಪೋಸ್ಟ್ ಗ್ರಾಜ್ಯುಯೇಟ್ಸ್ ಇಂಜಿನಿಯ್ಸ್ ಪಿಹೆಚ್‌ಡಿ ಮಾಡಿದವರು, ಮತ್ತು ಎಮ್.ಎ. ಮಾಡಿರುವವರು ಇವರೆಲ್ಲರೂ ಸೇರಿಸಿದರೆ 18,000 ಜನ ಇದ್ದಾರೆ. ಹೀಗಾಗಿ ಇವತ್ತು ಆ ಸಂಖ್ಯೆ ದಿನೇ ದಿನೇ ಬೆಳೆಯುತ್ತಿದೆ. ಬೆಳೆದು ಇವತ್ತು ಅವರು ಪರ್‌ವರ್ಟಿಡ್ ಆಗಿ ಅವರು ಅಡ್ಡಾಡುತ್ತಿದ್ದಾರೆ. ಅವರು ಯಾವ ಪಕ್ಷದ ಮುಖಂಡರಿಗೆ ನೋಡಿದರೂ ಅವರವರ ಕೈಕಟ್ಟಿಕುಳಿತು ರಾಜಕಾರಣದ ವಿಚಾರ ಮಾಡನಾಡಿಕೊಂಡು ಸಿಗರೇಟ್ ಬೀಡಿ ಸೇದಿಕೊಂಡು ಅಲ್ಲೇ ಕೂತಿರುತ್ತಾರೆ. ಅವರಿಗೆ ನಾವು ಏನೂ ಹೇಳುವ ಹಾಗೆ ಇಲ್ಲ. ಅನೇಕ ಜನ ಕೇಳುತ್ತಾರೆ ನಮ್ಮ ಸಮಸ್ಯೆನೀವುಹೇಗೆ ಬಗೆಹರಿಸುತ್ತೀರಿ? ಏನು ಮಾಡಿದ್ದೀರಿ? ನಮ್ಮ ವಿಷಯ? ನಿಮ್ಮ ಸರ್ಕಾರ ಇದ್ದಾಗ ಏನು ಮಾಡಿತು? ಈ ಸರ್ಕಾರ ಇದ್ದು ಏನು ಮಾಡಿತು? ಮುಂದೆ ನಮ್ಮ ಭವಿಷ್ಯ ಏನು ಮಾಡಬೇದೆಂದಿದ್ದೀರಿ? ನಮಗೆ ಇಷ್ಟೊಂದು ವಿದ್ಯಾಭ್ಯಾಸವನ್ನು ನೀವು ಮಾಡಿರಿ, ಐಟಿಐ ಕಲಿತಿರಬಹುದು, ಮೆಡಿಕಲ್ ಕಲಿತಿರಬಹುದು, ಇಂಜಿನಿಯರಿಂಗ್ ಕಲಿತಿರಬಹುದು, ಆದರೆ

ಇವೊತ್ತು ನಾವು ಅನ್ ಎಂಪ್ಲಾಯ್ಡ್ ಆಗಿ ಕೂತಿದ್ದೇವೆ. ನಮ್ಮ ಬಗ್ಗೆ ಏನು ಚಿಂತನೆ ಮಾಡುತ್ತೀರಿ ಎನ್ನುವ ಮಾತನ್ನು ಎಲ್ಲಾ ಕಡೆ ಕೇಳುತ್ತಿದ್ದೇನೆ. ಆದರೆ ಇದರ ಬಗ್ಗೆ ನಾವು ಏನೂ ಚಿಂತನೆ ಮಾಡಿಲ್ಲ. ನೀವು ಕೂಡ ನಿಮ್ಮ ಬಡ್ಜೆಟ್‌ನಲ್ಲಿ ಅವರ ಬಗ್ಗೆ ಯಾವ ಚಿಂತನೆಯನ್ನೂ ಮಾಡಿಲ್ಲ. ಇದು ಪ್ರತಿ ವರ್ಷ 10 ರಿಂದ 20 ಪರ್ಸೆಂಟ್ ಇದಕ್ಕೆ ಆ್ಯಡ್ ಆಗುತ್ತಿದೆ. 1980-81 ರಲ್ಲಿ ಆರು ಲಕ್ಷ ಅನ್ ಎಂಪ್ಲಾಯ್ಡ್ ಇದ್ದರು, ಇವತ್ತು ಆ ಸಂಖ್ಯೆ 17 ಲಕ್ಷ ಆಗಿದೆ. ಅದು ಈಗ ಮೂರುಪಟ್ಟು ಆಗಿದೆ. ಅದಕ್ಕಾಗಿ ನಾವು ಇದರ ಬಗ್ಗೆ ಚಿಂತನೆ ಮಾಡದೆ ಹೋದರೆ ನಾಳೆ ಇವರು ಆ್ಯಂಟಿ ಸೋಷಿಯಲ್ ಎಲಿಮೆಂಟಾಗಿ ಅಡ್ಡಾಡುವುದಕ್ಕೆ ಸರ್ಕಾರವೇ ಅವಕಾಶ ಮಾಡಿಕೊಟ್ಟ ಹಾಗಾಗುತ್ತದೆ. ಇದಕ್ಕಾಗಿ ಹೊಸ ಕಾರ್ಖಾನೆಗಳು ಬರಬೇಕು. ಆದ್ದರಿಂದ ಇರತಕ್ಕಂತಹ ಕಾರ್ಯಕ್ರಮಗಳನ್ನು ಉಳಿಸಿಕೊಳ್ಳಬೇಕು. ಅದನ್ನು ನೀವು ನೋಡಿ ಎಂದರೆ ಏಕೆ ಇಟ್ಟುಕೊಳ್ಳಬೇಕು, ತೆಗೆದು ಹಾಕಬೇಕು ಎಂದು ಹೇಳಿದರೆ, ಅದು ನಿಮಗೆ ಬಿಟ್ಟ ವಿಷಯ. ಆದರೆ ಕಷ್ಟ ಪಟ್ಟು ಹಿಂದಿನ ಸರ್ಕಾರಗಳು ಕಟ್ಟಿಸಿದ, ಸರ್ ಎಮ್. ವಿಶ್ವೇಶ್ವರಯ್ಯನವರ ಕಾಲದಿಂದ ಬಂದಂತಹ ಅನೇಕ ಸಂಸ್ಥೆಗಳಿವೆ, ಭದ್ರಾವತಿ ಐರನ್ ಅಂಡ್ ಸ್ಟೀಲ್ ಕಾರ್ಖಾನೆ, ಕೇಂದ್ರ ಸರ್ಕಾರಕ್ಕೆ ವಹಿಸಿ ಕೊಟ್ಟಿರುವ ಹಾಗೆ ಒಳ್ಳೆಯ ರೀತಿಯಿಂದ ನಡೆಸತಕ್ಕಂತಹ ಜನ ಬಂದರೆ ಅವರಿಗೆ ವಹಿಸಿ ಕೊಡಿ, ಇಲ್ಲದಿದ್ದರೆ ನೀವು ಪಬ್ಲಿಕ್ ಅಂಡರ್ ಟೇಕಿಂಗ್‌ನಲ್ಲಿ ನೀವೇ ಎಕ್ಸ್‌ಪರ್ಟ್ಸ್ ಇಟ್ಟು ಸುಧಾರಣೆ ಮಾಡುವುದಾದರೆ ಮಾಡಿ. ಅದು ಬಿಟ್ಟು ಆ ಕಡೆ ಗಮನ ಇಲ್ಲ ಎಂದರೆ ನೀವು ಏನು ಮಾಡುವುದು? ಅಕ್ಯುಮ್ಯುಲೇಟಿಡ್ ಲಾಸ್ ಆಗುತ್ತಿದೆ, ಲಾಸ್ ಮೇಲೆ ಲಾಸ್ ಆಗುತ್ತಿದೆ, 990 ಕೋಟಿ ಇನ್‌ವೆಸ್ಟ್ ಮಾಡಿರಬಹುದು, ನಾಳೆ ಇನ್ನು ಸಾವಿರ ಕೋಟಿ ರೂಪಾಯಿ ಮಾಡಿದರೂ ಕೂಡ ಏನೂ ಪ್ರಯೋಜನವಾಗುವುದಿಲ್ಲ. ಒಂದು ಕಡೆ ಕಡಿಮೆ ಮಾಡುತ್ತೀರಿ, ಇನ್ನೊಂದು ಕಡೆ ಇನ್‌ವೆಸ್ಟ್‌ಮೆಂಟನ್ನು ಹೆಚ್ಚು ಮಾಡಿಕೊಂಡು ಹೋಗುತ್ತೀರಿ. ಇನ್ನೊಂದು ವಿಷಯ, ಬಿಡಿಸಿ ಎಷ್ಟರ ಮಟ್ಟಿಗೆ ನಮ್ಮ ರಾಜ್ಯದಲ್ಲಿ ನಾವು ಸಾಧನೆ ಮಾಡಿದ್ದೇವೆ ಇದನ್ನು ನಾವುಗಮನಿಸಿದರೆ ಆಲ್ ಇಂಡಿಯಾ ಆ್ಯವರೇಜ್‌ಗೆ ನಾವು ಇನ್ನು ತಲುಪಿಲ್ಲ ಎಂಬ ಮಾತನ್ನು ನಾನು ಇವತ್ತು ಹೇಳುತ್ತಿದ್ದೇನೆ. ಒಂದೇ ಒಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ,

Gross Domestic Product or economic growth rate which was 5.40% last year has come down to 5% this year. The growth rate of real net domestic product is as follows:

ಪ್ರೈಮರಿ ಸೆಕ್ಟಾರ್‌ನಲಿಲ್ಲ 3-4 ಉದಾಹರಣೆ ಹೇಳಿ ನಾನು ಇದನ್ನುಕ್ಲೋಸ್ ಮಾಡುತ್ತೇನೆ. ಅಗ್ರಿಕಲ್ಚರ್‌ನಲ್ಲಿ 3.30, ಫಾರೆಸ್ಟ್‌ನಲ್ಲಿ ಮೈನಸ್ - 1, ಕೃಷಿಯಲ್ಲಿ 3.40 ಕೋಟಿ, ಉಳಿದದ್ದು ಮ್ಯಾನಿಫ್ಯಾಕ್ಚರಿಂಗ್, ಕನ್‌ಸ್ಟ್ರಕ್ಷನ್, ಎಲೆಕ್ಟ್ರಿಸಿಟಿ ಮತ್ತು ಟ್ರಾನ್ಸ್‌ಪೋರ್ಟ್ ಇವೆಲ್ಲಾ ಇದೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಅದರಲ್ಲಿ ಕೂಡ ನಾವು ಇವತ್ತು ಗ್ಯಾಸ್ ಡೂಮೆಸ್ಟಿಕ್ ಪ್ರಾಡಕ್ಟ್‌ನಲ್ಲಿ ಕೂಡ ನಾವುಹಿಂದೆ ಬಿದ್ದಿದ್ದೇವೆ. ಏಕನಾಮಿಕ್ ಗ್ರೋಥ್ ರೇಟ್ ಏನಿದೆ, ಇದನ್ನು ಕೂಡ ಎಷ್ಟು ಸಾಧನೆ ಮಾಡಬೇಕೋ, ಆ ಸಾಧನೆಯನ್ನು ಇದರ ಪ್ರಕಾರ ನಾವು ಮಾಡಿಲ್ಲ. ಈ ಮಾತನ್ನು ನಮ್ಮ ಡಾ. ಡಿ. ಎಮ್. ನಂಜುಡಪ್ಪನವರು ಗುಲ್ಬರ್ಗ ಯೂನಿವರ್ಸಿಟಿಯಲ್ಲಿ ಲೆಕ್ಚರ್ ಕೊಡುವಾಗ ಅವರೇ ಹೇಳಿದರು. ಅದು ನಿಮ್ಮಲ್ಲಿರತಕ್ಕಂತಹ ಅಂಕಿ ಸಂಖ್ಯೆ ಇದ್ದರೆ ಬೇಕಾದರೆ ಅದನ್ನು ಹೇಳಿ. ಈ ರೀತಿಯಾಗಿ ಈ ಒಂದು ದಿಕ್ಕಿನಲ್ಲಿ ಕೂಡ ನಾವು ಹಿಂದೆ ಬಿದ್ದಿದ್ದೇವೆ. ಡಿಫಿಸಿಟ್ ನಿಮ್ಮ ಕಾಲದಲ್ಲಿ ಯಾವ ರೀತಿಯಾಗಿ ಹೆಚ್ಚಿಕೊಂಡು ಬಂದಿದೆ, ಇನ್‌ಕಂ ಒಂದು ಕಡೆ ಶಾರ್ಟ್‌ಫಾಲ್ ಆಗುವುದು ಬೇರೆ, ನಾನು ಬಹಳ

ವಿಸ್ತಾರವಾಗಿ ಹೇಳಿದ್ದೇನೆ. ಪ್ಲ್ಯಾನ್ ಔಟ್‌ಲೇಯಲ್ಲಿ ಕೂಡ ಯಾವ ರೀತಿಯಾಗಿ ಬರಬೇಕು ಎನ್ನತಕ್ಕಂಥದ್ದು ಕೂಡ ಹೇಳಿದ್ದೇನೆ. ಈ ವಿಚಾರದಲ್ಲಿ ಯಾವ ರೀತಿಯಾಗಿ ಕೊರತೆ ಬಂದಿತು ಎಂದೂ ಕೂಡ ಹೇಳಿದ್ದೇನೆ. ಈ ನಿಮ್ಮ ಅಡಿಷನಲ್ ರಿಸೋರ್ಸಸ್ ಎಂದರೆ 15 ವರ್ಷದಲ್ಲಿ ಸುಮಾರು 1971-72 ರವರೆಗೆ ಫಿಗರ್ಸ್ ತೆಗೆದುಕೊಂಡರೂ ಈ ಮೂರು ವರ್ಷದಲ್ಲಿ ಇವರು ಏನು ಹೈಯಸ್ಟ್ ಟ್ಯಾಕ್ಸ್ ಹಾಕಿದ್ದಾರೆ ಇದರ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡಿದೆ ಸುಮಾರು 700 ರಿಂದ 800 ಕೋಟಿ ರೂಪಾಯಿ ಟ್ಯಾಕ್ಸ್ ರೂಪದಲ್ಲಿ ಜನರಿಗೆ ಹೇರಿದ್ದಾರೆ. ನಾವು 15-20 ವರ್ಷದಲ್ಲಿ ಏಳೆಂಟುನೂರು ಕೋಟಿ ರೂಪಾಯಿ ಹೇರಿದರೆ ಇವರು ಬರೀ ಮೂರು ವರ್ಷದಲ್ಲ ಅಷ್ಟೋಂದು ಹೇರಿದ್ದಾರೆ. ಅದು ಅಲ್ಲದೆ ತಾವು ಪ್ರತಿವರ್ಷ ಮಾಡುವ ಫಜಿಕಲ್ ಡೆಫಿಸಿಟನ್ನು ತೆಗೆದುಕೊಂಡು ನೋಡಿ. 1981-82 ರಿಂದ 1998-99 ರವರೆಗೆ ಫಿಗರ್ಸ್‌ನ್ನು ಹೋಲಿಸಿ ನೋಡಿದರೆ ನೀವು ನಿಜವಾಗಲೂ ಹೈಯಸ್ಟ್ ಸಾಧಿಸಿದ್ದೀರಿ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. 1981-82 ರಲ್ಲಿ ಫಿಜಿಕಲ ಡೆಫಿಸಿಟ್ ಪ್ರತಿ ವರ್ಷಕ್ಕೆ 80 ಕೋಟಿ ರೂಪಾಯಿ 1982-83ಕ್ಕೆ 42 ಕೋಟಿ ರೂಪಾಯಿ. ಇದೇ ರೀತಿಯಾಗಿ ನೀವು ಮುಂದುವರಿದರೆ 1985-86ನೇ ಸಾಲಿನಲ್ಲಿ ಲಹಾಗೂ 1984-85 ನೇ ಸಾಲಿನಲ್ಲಿ ನಿಮ್ಮ ಪ್ರಕಾರ ಇದ್ದಾಗ 205 ಕೋಟಿ ಹಾಗೂ 222 ಕೋಟಿ ರೂಪಾಯಿ. ಆಮೇಲೆ 1987-88ನೇ ಸಾಲಿನಲ್ಲಿ 200 ಕೋಟಿ ರೂಪಾಯಿ, ಆ ಮೇಲೆ ತಮ್ಮ ಕಾಲದಲ್ಲಿ ತಾವು ಹಣಕಾಸಿನ ಸಚಿವರಿದ್ದಾಗ 1995-96ನೇ ಸಾಲಿನಲ್ಲಿ 82 ಕೋಟಿ ಡೆಫಾಸಿಟ್ ಇದ್ದರೆ, 1996-97ರಲ್ಲಿ 132 ಕೋಟಿ ರೂಪಾಯಿ. 1997-98ರಲ್ಲಿ 96 ಕೋಟಿ ರೂಪಾಯಿ, 1998-99 196 ಕೋಟಿ ಎಂದು ತಾವು ಹೇಳಿದ್ದೀರಿ. ಹೀಗೆ ತಮ್ಮ ದನ್ನೆಲ್ಲಾ ತೆಗೆದುಕೊಂಡರೆ ಈಯರ್ ಪೈಸೆ ಡೆಫಿಸಿಟ್‌ನಲ್ಲೂ ತಾವು ಮುಂದೆ, ಅಡಿಷನಲ್ ರಿಸೋರ್ಸ್‌ನ್ನು ಅಂದರೆ ಟ್ಯಾಕ್ಸ್ ಹೇರುವುದರಲ್ಲೂ ತಾವುಮುಂದೆ, ಇದರಲ್ಲೂ ಕೂಡ ತಾವೇ ಪ್ರವೀಣರು. ಹೋಗಲಿ ಇಷ್ಟು ಮಾಡಿದ್ದೀರಿ, ಆ ಪ್ರಕಾರ ಪ್ರೊಗ್ರಾಮ್ಸ್ ಆದರೂ ಸಾಧನೆ ಮಾಡಿದ್ದೀರಾ? ಕಾರ್ಯಕ್ರಮಗಳನ್ನು ಸಾಧನೆ ಮಾಡುವುದಕ್ಕೋಸ್ಕರ ನಾವು ಇದನ್ನು ಮಾಡಿದ್ದೇವೆ ಎಂದು ಹೇಳಿದರೆ ನಾನು ಒಪ್ಪುತ್ತಿದ್ದೆ. ಹೋದ ವರ್ಷದ ಬಡ್ಜೆಟ್‌ನಲ್ಲಿ ತಾವು ಘೋಷಣೆ ಮಾಡಿದಂಥ ವಿಶೇಷವಾದ ಕಾರ್ಯಕ್ರಮಗಳು ಎಂದರೆ ಯುವ ಚೇತನ. ಅದರಲ್ಲಿ ಪರಿಶಿಷ್ಟ ಜಾತಿಹಾಗೂ ಪರಿಶಿಷ್ಟ ಪಂಗಡದ ಹುಡುಗರಿಗೆ ತಾವು ಸೆಲ್ಫ್ ಎಂಪ್ಲಾಯ್‌ಮೆಂಟ್ ಕೊಡುತ್ತೇವೆ ಎಂದುಹೇಳಿದ್ದೀರಿ. ಅದರ ಅಂಕಿ ಅಂಶ ತಮ್ಮ ಹತ್ತಿರ ಇದೆ. ತಮ್ಮ ಸಾಧನೆ ಇಷ್ಟಿದೆ ಎಂದರೆ ಕೇವಲ ಶೇಕಡಾ ಎರಡರಷ್ಟು. Finance assistance for rural unemployment: The amount earmarked in the budget is Rs. One crore.

ಲೆಕ್ಕ ಹಾಕಿ ಸ್ವಾಮಿ, ಹಳ್ಳಿಯಲ್ಲಿ ಇರತಕ್ಕಂಥ ಮಕ್ಕಳು, ಅನ್ ಎಂಪ್ಲಾಯ್ಡ್ ಯಾರು ಇದ್ದಾರೆ, ಎಜ್ಯುಕೇಟೆಡ್ ಯೂತ್ಸ್ ಯಾರು ಇದ್ದಾರೆ ಅವರಿಗೆ ಸಹಾಯ ಮಾಡುತ್ತೇವೆಂದುಹೇಳಿ ಸ್ವಾವಲಂಬನೆ ಎನ್ನುವ ಯೋಜನೆಯ ಕೆಳಗೆ ಒಂದು ಕೋಟಿ ರೂಪಾಯಿ ಇಟ್ಟಿದ್ದೀರಿ. ಆದರಿಂದ ಎಷ್ಟು ಜನರಿಗೆ ಸಹಾಯ ಆಗುತ್ತದೆ ಹಾಗೂ ಎಷ್ಟು ಜನರ ಅನ ಎಂಪ್ಲಾಯ್‌ಮೆಂಟ್ ಇವೊತ್ತು ದೂರ ಆಗಿದೆ ಎನ್ನತಕ್ಕಂಥದ್ದನ್ನು ತಾವುತಿಳಿದುಕೊಳ್ಳಬೇಕು ಮತ್ತು ಅದರ ಅಂಕಿ ಅಂಶಗಳನ್ನು ಕೂಡ ತಾವು ಕೊಡಬೇಕು. ಆಮೇಲೆ ಸ್ವಸ್ತಿಗ್ರಾಮ selection of 100 model villages.

ಇದು ತಾವು ಮಾಡಿರುವುದು. ಇದರ ಸಾಧನೆಯನ್ನು ಕೂಡ ತಾವು ನೋಡಿದರೆ, ಬಹುಶಃ ಇದರಲ್ಲಿ ತಾವು ಹಿಂದೆ ಬಿದ್ದಷ್ಟು ಇನ್ನಾವುದರಲ್ಲೂ ತಾವು ಹಿಂದೆ ಬಿದ್ದಿಲ್ಲ ಎಂದು ನನಗನ್ನಿಸುತ್ತದೆ. ನಾನು ಅದರ ಅಂಕಿ ಅಂಶಗಳನ್ನು ಕೂಡ ಕೊಡುತ್ತೇನೆ. ತಾವು ಒಂದು ಚಾರ್ಟನ್ನು ಮಾಡಿ ಕೊಟ್ಟಿದ್ದೀರಿ. ಅದನ್ನು

ನಾನು ನಿರ್ಮಲ ಗ್ರಾಮ ಎನ್ನುವ ಯೋಜನೆಯ ಬಗ್ಗೆ ಮಾಡನಾಡುವಾಗ ಹೇಳುತ್ತೇನೆ. ಆ ಮೇಲೆ ಅರುಣೋದಯ, ಇದು ಒಂದು ಯೋಜನೆ for poor women labourers to purchase land.

ಇದರಲ್ಲಿ ಏನು ಸಾಧನೆ ಆಗಿದೆ ಎನ್ನತಕ್ಕಂಥದ್ದನ್ನು ನೋಡಿದರೆ ಅದು ಕೇವಲ ಧಾರವಾಡ, ಗುಲ್ಬರ್ಗಾ ಮೈಸೂರು ಮತ್ತು ತುಮಕೂರು ಜಾಗಗಳನ್ನು ಬಿಟ್ಟರೆ ಬೇರೆ ಕಡೆ ಅದರ ಸಾಧನೆ ಇಲ್ಲ ಎನ್ನತಕ್ಕಂಥದ್ದನ್ನು ನಾವು ನಿಮ್ಮ ಅಂಕಿ ಅಂಶಗಳ ಪ್ರಕಾರ ನೋಡಬಹುದು. ಅಂದರೆ ನೀವು ಯಾವ ಘೋಷಣೆಗಳನ್ನು ಮಾಡಿದ್ದೀರಿ ಆ ಘೋಷಣೆಗಳ ಮೇಲೆ ಇವ್ಹೋತ್ತು ನಿಮಗೆ ನಂಬಿಕೆ ಇಲ್ಲ. ಮತ್ತು ನಂಬಿಕೆ ಇರದೇ ಇರತಕ್ಕಂಥ ಸರ್ಕಾರ ಇದ್ದರೆ ಅದು ಇಂಪ್ಲಿಮೆಂಟ್ ಮಾಡುವುದಕ್ಕೆ ಕೂಡ ಸಾಧ್ಯವಿಲ್ಲ. ಹೀಗಾಗಿ ತಮ್ಮ ಯುವಚೇತನ ಕಾರ್ಯಕ್ರಮ ಫೇಲ್, ಸ್ವಾವಲಂಬನೆ ಕಾರ್ಯಕ್ರಮ ಫೇಲ್ ಅರುಣೋದಯ ಫೇಲ್ ಸ್ವಸ್ತಿ ಕಾರ್ಯಕ್ರಮ ಕೂಡ ಫೇಲ್ ಆಗಿವೆ. ಆ ಮೇಲೆ ಐದನೇ ಯೋಜನೆಯೊಂದು ಇದೆ. ಅದೆ '' ನವಚೇತನ''. Financial assistance to destitute widows for starting petty business and other activities.

ಇದು ಅಲ್ಲದೆನೇ ಇವ್ಹೊತ್ತು ನಿಮ್ಮ ಬಡ್ಜೆಟ್‌ನಲ್ಲಿ ಇನ್ನು ಎರಡು ಹೊಸ ಯೋಜನೆಗಳನ್ನು ನೀವು ಅನೌನ್ಸ್ ಮಾಡಿದ್ದೀರಿ. ಅವು ಯಾವುವು ಎಂದರೆ '' ಅರಿವು'' ಮತ್ತು '' ಮಾಂಗಲ್ಯಭಾಗ್ಯ''. ಈ ಹಿಂದೆ ಹೆಗಡೆಯವರ ಕಾಲದಲ್ಲಿ ''ತಾಳಿಭಾಗ್ಯ'' ಎಂಬ ಯೋಜನೆ ಇತ್ತು. ಈಗ ಅದನ್ನು ''ಮಾಂಗಲ್ಯ'' ಎಂದು ಬದಲಾವಣೆ ಮಾಡಿದ್ದಾರೆ. ಬರೀ ಲೇಬಲನ್ನು ಮಾತ್ರ ಚೇಂಜ್ ಮಾಡಿದ್ದಾರೆ. ಈ ಯೋಜನೆಯಲ್ಲಿ ಐದು ಸಾವಿರ ರೂಪಾಯಿ ಕೊಡತಕ್ಕಂಥದ್ದು ಇದೆ. ಅದು ಮೊದಲು ಫೇಲ್ಯೂರ್ ಆಗಿದೆ. ಇದು ಎಷ್ಟುರಮಟ್ಟಿಗೆ ಉಪಯೋಗ ಆಗುತ್ತದೆ ನೋಡೋಣ. ಅಂದರೆ ಇವೆರಡು ಯೋಜನೆ ಸೇರಿ ಒಟ್ಟು ಏಳು ಕಾರ್ಯಕ್ರಮಗಳಾದವು. ಈ ಏಳು ಕಾರ್ಯಕ್ರಮದಲ್ಲಿ ನಿಮ್ಮ ಸಾಧನೆ ಏನು ಎನ್ನತಕ್ಕಂಥದ್ದನ್ನು ಹೇಳಿ? ಎಲ್ಲವನ್ನೂ ನಾವು ವಿಫಲತೆಯನ್ನು ಕಂಡಿದ್ದೇವೆ. ಉದಾಹರಣೆಗೆ ನಾನು ಒಂದೇ ಒಂದು ಸ್ಕೀಮ್ ಬಗ್ಗೆ ಹೇಳುತ್ತೇನೆ. ಮೈಸೂರು ಜಿಲ್ಲೆಯಲ್ಲಿ ಸ್ವಾಲಂಬನೆ ಯೋಜನೆಯ ಕೆಳಗಡೆ ಲಭ್ಯವಿರುವ ಅನುದಾನ ಒಟ್ಟು ಐದು ಕೋಟಿ ಐವತ್ತೆಂಟು ಲಕ್ಷ ರೂಪಾಯಿ. ಆದರೆ ಅದರಲ್ಲಿ ನೀವು ಖರ್ಚು ಮಾಡಿದ್ದು ಕೇವಲ ಇಪ್ಪತ್ಮೂರು ಲಕ್ಷ ಅಂದರೆ ಸುಮಾರು ಶೇಕಡಾ ಆರರಷ್ಟು ಅಚೀವ್‌ಮೆಂಟ್ ನಿಮ್ಮ ಜಿಲ್ಲೆಯಲ್ಲಿ ಆಗಿದೆ. ಅಂದರೆ ನಿಮಗೆ ಇದರಲ್ಲಿ ಎಷ್ಟರಮಟ್ಟಿಗೆ ಆಸಕ್ತಿ ಇದೆ ಎನ್ನತಕ್ಕಂಥದ್ದು ತಾವು ನೋಡಬೇಕು. ಆಷ್ಟೇ ತರಬೇತಿ ಕೊಡತಕ್ಕಂಥದ್ದರಲ್ಲಿ ಕೂಡ ಒಟ್ಟು ನೀವು 113 ಜನರಿಗೆ ಟ್ರೇನಿಂಗ್‌ನ್ನು ಕೊಟ್ಟಿದ್ದೀರಿ. ಇದು ಸ್ವಾವಲಂಬನೆ ಸ್ಕೀಮ ಕೆಳಗೆ ಆದಂಥ ಕೆಲಸ. ಅಷ್ಟೇ ಅಲ್ಲ ನಿಮ್ಮ ಕಾಲದಲ್ಲಿ ಪ್ರಗತಿಯಾಯಿತು, ನಮ್ಮ ಕಾಲದಲ್ಲಿ ಎಷ್ಟು ಪ್ರಗತಿಯಾಯಿತು, ನಮ್ಮ ಕಾಲದಲ್ಲಿ ಎಷ್ಟು ಪ್ರಗತಿಯಾಯಿತು, ನಮ್ಮ ಕಾಲದಲ್ಲಿ ಆಶ್ರಯ ಹಾಗೂ ಅಂಬೇಡ್ಕರ್ ಮನೆಗಳನ್ನು ಕಟ್ಟಿದ್ದೇವೆ, ನಿಮ್ಮ ಕಾಲದಲ್ಲಿ ಎಷ್ಟು ಆಶ್ರಯ ಹಾಗೂ ಅಂಬೇಡ್ಕರ್ ಮನೆಗಳನ್ನು ಕಟ್ಟಿದ್ದೀರಿ ಎಂದು ಸಾಕಷ್ಟು ಸಾರಿಹೇಳಿದರು. ನಾನು ಈ ಬಗ್ಗೆ ತಮಗೆ ಅಂಕಿ ಅಂಶಗಳನ್ನು ಕೊಡುತ್ತೇನೆ, ಬಹುಶ: ಈ ಅಂಕಿ ಅಂಶಗಳು ತಮ್ಮ ಹತ್ತಿರ ಕೂಡ ಇರಬಹುದುಮತ್ತು ಅದನ್ನು ತಿಳಿದುಕೊಂಡೇ ತಾವು ಉತ್ತರವನ್ನು ಕೊಟ್ಟಿರಬಹುದು ಎಂದು ನಾನು ಭಾವಿಸುತ್ತೇನೆ. ತಾವು 1997-98ನೇ ಸಾಲಿನಲ್ಲಿ ರೂರಲ್ ಏರಿಯಾಕ್ಕೆ ಒಂದು ಲಕ್ಷ ಸೈಟನ್ನು ಹಂಚುವುದುಹಾಗೂ ಅರ್ಬನ್ ಏರಿಯಾದಲ್ಲಿ 50 ಸಾವಿರ ಸೈಟನ್ನು ಹಂಚುತ್ತೇವೆ

ಎಂದು ಟಾರ್ಗೆಟ್‌ನ್ನು ಇಟ್ಟುಕೊಂಡಿದ್ದರು. ಆದರೆ ಅಚೀವ್‌ಮೆಂಟ್ ಆಗಿದ್ದು ರೂರಲ್ ಏರಿಯಾದಲ್ಲಿ 22,241 ಹಾಗೂ ಅರ್ಬನ್ ಏರಿಯಾದಲ್ಲಿ ಹಂಚಿಕೆಯಾಗಿದ್ದು ಕೇವಲ 3398. ಎಂದು ತಾವು ಇದೇ ಸದನದಲ್ಲಿ 30ನೇ ಜನವರಿ 1998 ರಂದು ಉತ್ತರವನ್ನು ಕೊಟ್ಟಿದ್ದೀರಿ. ಅಂದರೆ ರೂರಲ್ ಏರಿಯಾದಲ್ಲಿ ಶೇಕಡಾ 22 ರಷ್ಟು ಹಾಗೂ ಅರ್ಬನ್ ಏರಿಯಾದಲ್ಲಿ ಶೇಕಡಾ 7 ರಷ್ಟು ನಿಮ್ಮ ಅಚೀವ್‌ಮೆಂಟ್ ಆಗಿದೆ. ನಾವು ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದೇವೆ ಎಂದು ಹೇಳಿಕೊಳ್ಳುತ್ತೀರಲ್ಲಾ? ಏನು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ ? ಇದೇನೂ ನೀವು ರಿವ್ಯೂವ್ ಮಾಡಿದ್ದುದು? ನಿಮಗೆ ಸೈಟ್ ಹಂಚುವುದಕ್ಕೂ ಕೂಡ ಶಕ್ತಿ ಇಲ್ಲ. ಇದು ಸೈಟ್ ಬಗ್ಗೆಯಾಯಿತು. ಇನ್ನು ಮನೆ ಕಟ್ಟುವುದರ ಬಗ್ಗೆ ಹೇಳುತ್ತೇನೆ. ನೀವು ಮನೆಗಳನ್ನು ಕಟ್ಟುವುದಕ್ಕೆ ಜಿಲ್ಲಾಧಿಕಾರಿಗಳವರ ಹತ್ತಿರ ಖರ್ಚಾಗದೇ ಹಣ ಉಳಿದಿದೆ. ಅರ್ಬನ್ ಏರಿಯಾದಲ್ಲಿ ಖರ್ಚಾಗದೇ ಇರತಕ್ಕಂಥ ಹಣ ಜಿಲ್ಲಾಧಿಕಾರಿಗಳವರಲ್ಲಿ ಉಳಿದದ್ದು ಮೂರು ಕೋಟಿ ರೂಪಾಯಿ. ಮಾನ್ಯ ಮುಖ್ಯಮಂತ್ರಿಗಳು ಬಡವರಿಗೆ ಸೂರು ಕೊಡುತ್ತೇವೆ, ಅನ್ನ ಕೊಡುತ್ತೇವೆ, ಅದು ಕೊಡುತ್ತೇವೆ, ಇದು ಕೊಡುತ್ತೇವೆ ಎಂದು ಭಾಷಣ ಮಾಡಿದರು. ಕಮಿಟ್‌ಮೆಂಟ್ ಇದೆ ಎಂದು ಹೇಳುತ್ತೀರಲ್ಲಾ ಇದೇನಾ ನಿಮ್ಮ ಕಮಿಟ್‌ಮೆಂಟ್? ಒಂದು ವರ್ಷದಿಂದ ನೀವು ಏಳು ಪರ್ಸೆಂಟ್ ಅಚೀವ್‌ಮೆಂಟ್ ಹೇಳುತ್ತೀರಲ್ಲಾ, ಇದೇನಾ ನಿಮ್ಮ ಸಾಧನೆ? ಈ ಕೆಲಸವನ್ನು ಮಾಡಿದಕ್ಕಾಗಿ ನಿಜವಾಗಲೂ ಈ ಸರ್ಕಾರಕ್ಕೆ ನಾಚಿಕೆಯಾಗಬೇಕು ಅಧ್ಯಕ್ಷರೆ,ನಾನು ಪ್ರತಿಯೊಂದು ಜಿಲ್ಲೆಗಳಲ್ಲಿನ ವಿವರಗಳನ್ನು ಕೊಡಬಹುದು ಆದರೆ ಸಮಯದ ಅಭಾವದಿಂದ ಅವುಗಳನ್ನು ಕೊಡುವುದಕ್ಕೆ ಹೋಗುವುದಿಲ್ಲ.

1. 10 ಪಿ. ಎಂ.

ಇದೇ ರೀತಿಯಾಗಿ ಇವರು ಅಂಬೇಡ್ಕರ ಯೋಜನೆಯಡಿಯಲ್ಲಿ ಹಣವನ್ನು ಕೊಟ್ಟಿದ್ದಾರೆಂದು ಹೇಳಿದ್ದಾರೆ. 1997-98ನೇ ಸಾಲಿನಲ್ಲಿ ಅಂಬೇಡ್ಕರ್ ಯೋಜನೆಯಡಿಯಲ್ಲಿ ಮನೆ ಕಟ್ಟಿಕೊಳ್ಳತಕ್ಕಂಥವರಿಗೆ ತಾವು ಯಾವ ಹಣವನ್ನು ಬಿಡುಗಡೆ ಮಾಡಿಲ್ಲ. ಹೋದವರ್ಷ ಏನಿತ್ತೋ ಅದೇ ಹಣವನ್ನು ಬಿಡುಗಡೆ ಮಾಡುತ್ತಿದ್ದೀರೇ ಹೊರತಾಗಿ 1997-98ರಲ್ಲಿ ನೀಡಿದಂತಹ ಅಲಾಟ್‌ಮೆಂಟ್‌ನಲ್ಲಿ ಯಾವ ಹಣವನ್ನು ಕೊಟ್ಟಿಲ್ಲವೆಂಬ ಮಾಡನ್ನು ಇವತ್ತು ನಾನು ಸ್ಪಷ್ಟಪಡಿಸುತ್ತೇನೆ. ತಾವು ಕೂಡ ಒಪ್ಪಿಕೊಂಡಿದ್ದೀರಿ. ಇದಕ್ಕೆ ಸಾಕ್ಷಿ ಒಂದಲ್ಲ, ಅನೇಕ ಕಾರ್ಯಕ್ರಮಗಳು ಬರೀ ಪತ್ರದಲ್ಲಿ ಉಳಿದಿವೆ. ಆಶ್ರಯ ಯೋಜನೆಗೆ ಹೋಗುವುದಕ್ಕೆ ಮುಂಚೆ ನಾನು ಸಮಾಜಕಲ್ಯಾಣ ಇಲಾಖೆಯ ಬಗ್ಗೆ ಹೇಳುತ್ತೇನೆ. ಇದರಲ್ಲಿ ಅವರು ಎಸ್‌ಸಿಪಿ ಹಾಗೂ ಬೇರೆ ಯೋಜನೆಯಡಿಯಲ್ಲಿ ಸುಮಾರು 420 ಕೋಟಿ ರೂಗಳ ಟೋಟಲ್ ಅಲೋಕೇಷನ ಇಡಲಾಗಿದೆ. ಅದರಲ್ಲಿ ಇಲ್ಲಿಯವರೆಗೆ ಖರ್ಚಾಗಿರುವುದು 71 ಕೋಟಿ 95 ಲಕ್ಷ ರೂಗಳು ಅಂದರೆ 7 ಪರ್ಸೆಂಟ್. ಸಿದ್ಧರಾಮಯ್ಯನವರೇ, ಎಸ್‌ಸಿಪಿನಲ್ಲಿ ಜನವರಿ ಅಂತ್ಯದವರೆಗೆ ಅಂಕಿಅಂಶಗಳನ್ನು ಮತ್ತು ಈಗ ಎರಡು ತಿಂಗಳಲ್ಲಿ ಏನು ಮಾಡಿದ್ದಾರೆನ್ನುವುದನ್ನು ಹೇಳಿ. 9 ತಿಂಗಳಲ್ಲಿ ನೀವು 7 ಪರ್ಸೆಂಟ್ ಅಚೀವ್ ಮಾಡಬೇಕೆಂದರೆ ನಿಮಗೆ ಹರಿಜನರ ಬಗ್ಗೆ ಎಷ್ಟು ಕಾಳಜಿ ವಹಿಸಿದ್ದಾರೆ ಎನ್ನುವುದಕ್ಕೆ ಇದೊಂದೇ ಉದಾಹರಣೆ ಸಾಕು. ಶೆಡ್ಯೂಲ್ಡ್ ಟ್ರೈಬ್‌ಗೆ 82 ಕೋಟಿ ರೂನಲ್ಲಿ ಇವರು ಖರ್ಚು ಮಾಡಿರುವುದು ಕೇವಲ 28 ಕೋಟಿ ರೂಪಾಯಿಗಳು. ಹೀಗೆ ಯಾವುದೇ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡರೂ ಕೂಡ ಇವತ್ತಿನ ದಿವಸ ಇದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೀರಾ. ಆಮೇಲೆ ಮಿನಿ ಅಂಬೇಡ್ಕರ ಭವನವನ್ನು

ಕಟ್ಟಿಸುತ್ತೇವೆಂದು ಹೇಳಿ ಎಲ್ಲರಿಂದ ವಿನಂತಿ ಪತ್ರಗಳನ್ನು ತೆಗೆದುಕೊಂಡರು. ಆದರೆ 120 ರಲ್ಲಿ ಇವತ್ತು ನೀವು ಅಚೀವ್ ಮಾಡಿದ್ದು ಕೇವಲ ಮೂರು, ಕೋಲಾರ, ಮೈಸೂರು ರಾಯಚೂರುನಲ್ಲ ಮಾತ್ರ. ಈ ಮೂರುಮಿನಿ ಅಂಬೇಡ್ಕರ್ ಭವನವನ್ನು ಬಿಟ್ಟರೆ ಇನ್ನು 117 ಪ್ರಾರಂಭವೇ ಆಗಿಲ್ಲ. ಅಂದರೆ ಎಷ್ಟರಮಟ್ಟಿಗೆ ನೀವು ಕಾಳಜಿ ವಹಿಸಿದ್ದೀರಿ. ನಿಮ್ಮ ಅಧಿಕಾರಿಗಳು ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಿದ್ದಾರೆ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಯಾವ ಸರ್ಕಾರವು ಮಾಡಿಲ್ಲ. ನಾವಾದರೂ ಮಾಡುತ್ತಿದ್ದೇವೆಂದು ಪ್ರಚಾರವನ್ನು ತೆಗೆದುಕೊಳ್ಳುವುದು. ಬಾಕಿಯದೆಲ್ಲಾ ಬಜೆಟ್‌ನ ಕಾಗದದಲ್ಲಿ ಇಟ್ಟುಕೊಳ್ಳುವುದು. ಈ ಮಾತನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಉಪಾಧ್ಯಕ್ಷರೆ, ಇನ್ನು ಮುಂದಾದರೂ ಕೂಡ, ಇದರ ಕಡೆಗೆ ಗಮನಕೊಡುತ್ತಾರೆಂದು ನಾನು ತಿಳಿದು ಕೊಂಡಿದ್ದೇನೆ. ಇನ್ನು ಭಾಗ್ಯಜ್ಯೋತಿ ಮುಂತಾಗಿ ಇನ್ನೂ ಅನೇಕ ಯೋಜನೆಗಳಿವೆ. ಆ ಯೋಜನೆಯ ಕೆಳಗಡೆಯೂ ಕೂಡ 50 ಪರ್ಸೆಂಟ್ ಟಾರ್ಗೆಟ್‌ನ್ನು ಮುಟ್ಟಿಲ್ಲ. ನಾನು ನಿಮಗೆ ಹೇಳಬೇಕಾದರೆ ಹರಿಜನ ಜನಾಂಗಕ್ಕೆ ಭಾಗ್ಯಜ್ಯೋತಿ ಯೋಜನೆಯಲ್ಲಿ 425 ಲಕ್ಷದಲ್ಲಿ ಕೇವಲ 200 ಲಕ್ಷ ಅಂದರೆ 2 ಕೋಟಿ ರೂ ಖರ್ಚಾಗಿದೆ. 96-97ರಲ್ಲಿ 4 ಕೋಟಿ 10 ಲಕ್ಷ ಇದ್ದರೆ ಕೇವಲ ಒಂದು ಕೋಟಿ ರೂಗಳನ್ನು ಖರ್ಚು ಮಾಡಿದ್ದಾರೆ. ಹೀಗೆ ಎಲ್ಲಾ ಯೋಜನೆಯಲ್ಲಿ ಇವತ್ತು ಸೋಷಿಯಲ್ ವೆಲ್‌ಫೇರ್ ಯೋಜನೆಯನ್ನು ತೆಗೆದುಕೊಳ್ಳಿ ಅಥವಾ ನಿಮ್ಮ ರೂರಲ್ ಡೆವಲಪ್‌ಮೆಂಟ್‌ನ್ನು ತೆಗೆದುಕೊಳ್ಳಿ ಅಥವಾ ಅವರ ಇಲಾಖೆಯನ್ನು ತೆಗೆದುಕೊಳ್ಳಿ ಅವರು ಕೊಟ್ಟಂತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಿ ಎಲ್ಲಾ ಕಾರ್ಯಕ್ರಮಗಳಲ್ಲಿಯೂ ಕೂಡ ವಿಫಲರಾಗಿದ್ದಾರೆ. ಮತ್ತೊಂದು ಸಾಕ್ಷಿ ಇದೆ. ಅದು ಅಲ್ಲದೆ ಇವರು ಇನ್ನೊಂದು ಹೆಮ್ಮೆಯ ಸ್ಕೀಂ ಏನೆಂದರೆ ನಿರ್ಮಲ ಗ್ರಾಮ ಯೋಜನೆ...

ಉಪಾಧ್ಯಕ್ಷರು:- ನೀವು ಮಾತನಾಡುವುದಕ್ಕೆ ಶುರು ಮಾಡಿ ಎರಡು ಗಂಟೆಯಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಉಪಾಧ್ಯಕ್ಷರೇ, ಈ ಅಂಕಿಅಂಶಗಳನ್ನು ಏತಕ್ಕೆ ಕೊಡುತ್ತಿದ್ದೇನೆಂದರೆ, ಅವರು ಕೊಟ್ಟಂತಹ ಹಣವು ಎಷ್ಟರಮಟ್ಟಿಗೆ ಉಪಯೋಗವಾಗಿದೆ; ಹೇಳಿ. ಆ ಹಣ ಅವರಿಗೆ ತಲುಪುವುದಿಲ್ಲ. ಆರ್‌ಡಿಪಿಆರ್ ಬಗ್ಗೆ ಹೇಳುವುದಾದರೆ ನಿರ್ಮಲ ಗ್ರಾಮ ಯೋಜನೆ ಇದರ ಕೆಳಗೆ ಅವರ ಅಚೀವ್‌ಮೆಂಟ್ ಕೇವಲ ಈ ವರ್ಷದಲ್ಲಿ 24 ಪರ್ಸೆಂಟ್ ಮಾತ್ರ. ಇವತ್ತಿನ ದಿನ ಈ ಒಂದು ಕೆಲಸಕ್ಕೆ ಪ್ರೋತ್ಸಾಹ ನೀಡಿದ್ದಾರೆ ಎನ್ನುವುದಕ್ಕೆ ಇದೊಂದು ಸಾಕ್ಷಿ. ಏಕೆಂದರೆ 44 ಕೋಟಿ ರೂಪಾಯಿ ಇವರು ರಿಲೀಸ್ ಮಾಡಿದ್ದು, 19 ಕೋಟಿಯಲ್ಲಿ ಖರ್ಚಾಗಿರುವುದು ಕೇವಲ 2 ಕೋಟಿ ರೂ.ಗಳು. ಅಂದರೆ ಇಷ್ಟೊಂದು ಹೀನಾಯವಾಗಿ ಈ ಯೋಜನೆಗಳನ್ನು ನೋಡುತ್ತಾರೆಂದರೆ ಎಷ್ಟರಮಟ್ಟಿಗೆ ಜನರ ಬಗ್ಗೆ ಕಾಳಜಿ ಇದೆ ಎನ್ನತಕ್ಕಂಥದ್ದು ಇದರಿಂದಲೇ ನಾವುಕಂಡು ಹಿಡಿಯಬೇಕಾಗಿದೆ. ನೀರಾವರಿ ಇಲಾಖೆಯ ಬಗ್ಗೆ ನಾನುಹೇಳಬೇಕಾಗಿಲ್ಲ. ಈಗಾಗಲೇ ನಾವು ಅದನ್ನು ಪ್ರಸ್ತಾಪ ಮಾಡಿದ್ದೇನೆ. ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ, ಇಷ್ಟೊಂದು ಕಾರ್ಯಕ್ರಮಗಳನ್ನು ಅವರ ಹತ್ತಿರ ಇದ್ದರೂ ಕೂಡ ಮತ್ತು ಈ ರಾಜ್ಯವನ್ನು ಅಭಿವೃದ್ಧಿ ಪಡಿಸಬೇಕು ಎಂಬ ಆಸೆ ಅವರಿಗಿದ್ದರೆ ಇವತ್ತು ಬಹಳ ಪ್ರಾಮಾಣಿಕತೆಯಿಂದ ಅವರು ಕೆಲಸವನ್ನು ಮಾಡಬೇಕಾಗಿದೆ. ಆದರೆ ಇದರಲ್ಲಿ ಪ್ರಾಮಾಣಿಕತೆಯಿಂದ ಅವರು ಕೆಲಸವನ್ನು ಮಾಡಬೇಕಾಗಿದೆ. ಆದರೆ ಇದರಲ್ಲಿ ಪ್ರಾಮಾಣಿಕತೆಯ ಕೊರತೆ ಇದ್ದ ಕಾರಣ ಇವತ್ತು ಹೀಗಾಗಿದೆ. ನಮ್ಮ ಆಯವ್ಯಯವನ್ನು ನೋಡಿದೆ. ಹೋದವರ್ಷ 17 ಐ.ಟಿ.ಐ.ಗಳನ್ನು ಕೊಟ್ಟಿದ್ದೇವೆಂದು ಹೇಳಿದರು. ಆದರೆ ಎಲ್ಲಿ ಕೊಟ್ಟರೋ ಏನೋ ಗೊತ್ತಿಲ್ಲ. ಸತತವಾಗಿ 3 ವರ್ಷದಿಂದ ಎಲ್ಲೆಲ್ಲಿ ಯಾವ ಯಾವ ಉಪವಿಭಾಗಗಳಲ್ಲಿ ಇಲ್ಲ, ಅಲ್ಲಿ ಕೊಡಬೇಕು. ಆದರೆ 3

ವರ್ಷದಿಂದ ನಾವು ಸತತವಾಗಿ ಅಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಗುರು ಮೆಡಿಕಲ್‌ನಲ್ಲಿ ಅದು ಹಿಂದುಳಿದಂತಹ ಭಾಗ, ಕೊಡುವುದು ಈ ವರ್ಷದ ಪ್ರಶ್ನೆಯಲ್ಲ. ಕೈಟೀರಿಯಾ ಸರಿ ಇರಬೇಕಲ್ಲಾ. ಇಲ್ಲಿ ಆದ್ಯತೆಯ ಮೇರೆಗಾದರೂ ಕೊಡಬೇಕು. ಇದು ಅತ್ಯಂತ ದೊಡ್ಡ ಜಿಲ್ಲೆ. ಕರ್ನಾಟಕ ರಾಜ್ಯದಲ್ಲಿ ಬಿಜಾಪುರ, ಗುಲ್ಬರ್ಗ, ಧಾರವಾಡ ಇಲ್ಲಿ ಐಟಿಐ ಸಂಸ್ಥೆಗಳು ಕಡಿಮೆ ಇದೆ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ರಾಜ್ಯದಲ್ಲಿ ಸರ್ಕಾರಿ ಐಟಿಐ ಸಂಸ್ಥೆಗಳು ಹೆಚ್ಚಿಗೆ ಆಗಬೇಕೆಂದು ಪ್ರತಿಪಾದನೆ ಮಾಡಿದವನೆ ನಾನು. ಪ್ರೈವೇಟ್‌ನವರಿಗೆ ಕೊಡಬೇಡಿ. ಬಡವರ ಮಕ್ಕಳಿಗೆ ಪ್ರವೇಶ ಸಿಗಲು ಸರ್ಕಾರದ ಐಟಿಐಗಳು ಬರಬೇಕು. ನೀವು ನಿಮಗೆ ಇಚ್ಚೆ ಬಂದವರಿಗೆ ಕೊಟ್ಟಿರಬೇಕು. ಆದರೆ ನಾನು ಹೇಳುವುದು ಏನೆಂದರೆ ಅವಶ್ಯಕತೆಯನ್ನು ಕಂಡು ನೀವು ಕೊಡಬೇಕಾಗುತ್ತದೆ. ನೀವು ಅವಶ್ಯಕತೆಯನ್ನು ಕಂಡು ಕೊಡದೆಹೋದರೆ, ತಪ್ಪು ಮಾಡುತ್ತಿದ್ದೀರೆಂದು ನಾನು ಹೇಳಬೇಕಾಗುತ್ತದೆ. ಕಲಘಟಿಗೆ ನೀವು ಕೊಟ್ಟಿರುವುದು ಸಿದ್ದನಗೌಡರನ್ನು ಮನವೊಲಿಸಿಕೊಳ್ಳಲು ಹಾಗೂ ಅವರು ಲೋಕಶಕ್ತಿಗೆ ಹೋಗುವುದು ಬೇಡ ಇಲ್ಲೇ ಇರಲೆಂದು ನೀಡಿರುವುದೆಂದು ನಾನು ಹೇಳುತ್ತೇನೆ. ಧಾರವಾಡದಲ್ಲಿ ಹಿಂದುಳಿದ ಭಾಗ ಮುಂಡರಗಿ ಇದೆ.

ಶ್ರೀ ಸಿದ್ಧರಾಮಯ್ಯ :- ಮುಂಡರಗಿಗೆ ಕೊಟ್ಟಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮುಂಡರಗಿಗೆ ಕೊಟ್ಟಿದ್ದರೆ ಅದು ಹಿಂದುಳಿದಂತಹ ಭಾಗವೆಂದು ನಾನು ಹೇಳುತ್ತಿದ್ದೆ.

ಶ್ರೀ ಡಿ. ಆರ್ ಪಾಟೀಲ್ :- ಧಾರವಾಡ ಜಿಲ್ಲೆ ಒಂದುಶೈಕ್ಷಣಿಕ ಸೆಂಟರ್‌ಗೆ ಕೊಟ್ಟಿಲ್ಲ. ಅಲ್ಲಲ್ಲಿ ಇಂಡಸ್ಟ್ರೀಸ್ ಬರಬೇಕು ಎಂದು ಹೇಳುತ್ತೀರಿ. ಆದರೆ ಧಾರವಾಡಕ್ಕೆ ಕೊಡಲಿಲ್ಲ. ಮೊದಲು ಧಾರವಾಡ ಶೈಕ್ಷಣಿಕ ಸೆಂಟರ್‌ಗೆ ಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನೀವು ಕಾರ್ಮಿಕ ಇಲಾಖೆಯನ್ನು ವಹಿಸಿಕೊಂಡ ಮೇಲೆ ಅದರ ಬಗ್ಗೆ ಗಮನವನ್ನು ಕೊಟ್ಟಿಲ್ಲ. ಏಕೆಂದರೆ ಮಿನಿಮಮ್ ವೇಜಸ್ ಆಗಿಲ್ಲ. ಇವತ್ತು ಅಗ್ರಿಕಲ್ಚರ್ ಲೇವರ್ಸ್‌ದ್ದು ಸಮಸ್ಯೆ ಇರಬಹುದು, ಅನ್‌ಆರ್ಗಾನೈಜ್ಡ್ ಲೇಬರ್ಸ್ ಇರಬಹುದು, ಅಥವಾ ಕಲ್ಲು ಒಡೆಯತಕ್ಕಂತವರು ಇರಬಹುದು, ಮೆಷಿನರಿ ಕೆಲಸ ಮಾಡತಕ್ಕಂಥವರು ಇರಬಹುದು, ಬಿಲ್ಡಿಂಗ್ ಕೆಲಸ ಮಾಡತಕ್ಕಂತವರು ಇರಬಹುದು, ಬಿಲ್ಡಿಂಗ್ ಕೆಲಸ ಮಾಡತಕ್ಕಂಥವರು ಇರಬಹುದು, ರಸ್ತೆಯ ಕೆಲಸ ಮಾಡತಕ್ಕಂಥವರು ಇರಬಹುದು ಹೀಗೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಕೆಲಸ ಮಾಡತಕ್ಕಂಥ ಅಸಂಘತರು ಜನ ಏನಿದ್ದಾರೆ, ಆ ಕೂಲಿಕಾರರಿಗೆ ಏನಾದರೂ ಮಿನಿಮಮ್ ವೇಜ್ ನಿಗದಿ ಮಾಡಬೇಕು, ಅವರಿಗೆ ಏನಾದರೂ ವೆಲ್‌ಫೆರ್ ಸ್ಕೀಂನ್ನು ಈ ಆಯವ್ಯಯದಲ್ಲಿ ತಂದಿದ್ದೀರಾ? ಹೇಳಿ ನೋಡೋಣ. ಆ ಇಲಾಖೆಯನ್ನು ನೀವೇ ವಹಿಸಿಕೊಂಡಿದ್ದೀರಿ, ಆ ಇಲಾಖೆಯ ಉಸ್ತುವಾರಿಯನ್ನು ನೀವೇ ನೋಡುತ್ತಿದ್ದೀರೆ, ಆದರೆ ಈ ಆಯವ್ಯಯದಲ್ಲಿ ಒಂದು ನಯಾಪೈಸೆನೂ ಕೂಡ ಇಟ್ಟಿಲ್ಲ, ಅಂತಹ ಒಂದು ಕಾರ್ಮಿಕರ ಬಗ್ಗೆ ಯಾವ ಚಿಂತನೆಯನ್ನೂ ಕೂಡ ಮಾಡಿಲ್ಲ. ಸಿದ್ಧರಾಮಯ್ಯನವರೇ ಅರ್ಥ ಸಚಿವರಾಗಿದ್ದರು ಮತ್ತು ಹಣ ಕೂಡ ಇತ್ತು. ಕಾರ್ಮಿಕ ಇಲಾಖೆ ಬಗ್ಗೆ ಈ ಬಜೆಟ್‌ನಲ್ಲಿ ಏನು ಕಾಳಜಿ ವಹಿಸಿದ್ದಾರೆ ಎಂಬುದನ್ನು ಇವರು ಹೇಳಲಿ ನೋಡೋಣ. ಇವೊತ್ತು ಈ ಇಲಾಖೆ ವ್ಯಾಪ್ತಿಯಲ್ಲಿ ಲಕ್ಷಾಂತರ ಜನ, ಕೋಟ್ಯಾಂತರ ಜನರು ಬರುತ್ತಾರೆ. ಈ ಜನಗಳಿಗೆ ನೀವು ಏನು ಮಾಡಿದ್ದೀರಿ ಎಂಬುದನ್ನು ಹೇಳಿ. ಈ ಬಗ್ಗೆ ನೀವು ಕಾಳಜಿಯನ್ನು ವಹಿಸಿಕೊಂಡಿಲ್ಲ. ಇನ್ನು ದೊಡ್ಡ ದೊಡ್ಡ

ಇಂಡಸ್ಟ್ರೀಗಳು ನಮ್ಮಿಂದ ಇಂದು ಹೇಗೆ ದೂರವಾಗುತ್ತಿದೆಯೆಂದರೆ ನೀವು ಇಂಡಸ್ಟ್ರೀಗಳಿಗೆ ಇನ್ಫ್ರಾಸ್ಟ್ರಕ್ಚರ್ ಕ್ರಿಯೇಟ್ ಮಾಡದೇ ಇರುವ ಕಾರಣ ಒಳ್ಳೆ ಒಳ್ಳೆಯ ಇಂಡಸ್ಟ್ರೀಗಳು ಇಲ್ಲಿಂದ ಶಿಫ್ಟ್ ಆಗುತ್ತಿದೆಯೆನ್ನುವ ಮಾತನ್ನು ದೊಡ್ಡ ದೊಡ್ಡ ಉದ್ದಿಮೆದಾರರೇ ಇಂದಿನ ದಿನಗಳಲ್ಲಿ ಹೇಳುತ್ತಿದ್ದಾರೆ. ಉದಾಹರಣೆಗೆ ಹೇಳಬೇಕೆಂದರೆ ಮೊನ್ನೆ ಇಲ್ಲಿ ಟಾಟಾದವರು ಹೈಟೆಕ್ ಡಿಜಿಟಲ್ ಲೈಬ್ರರಿ ಇನಾಗರೇಟ್ ಮಾಡುವುದಕ್ಕೆ ಬಂದಿದ್ದರು. ಆಗ ಅವರು ಒಂದು ಮಾಡನ್ನು ಇಂಡಸ್ಟ್ರೀ ಬಗ್ಗೆ ಹೇಳಿದ್ದಾರೆ. ಇದನ್ನು ತಾವೂ ಕೂಡ ಓದಿರಬಹುದು. ಆದರೂ ಕೂಡ ಸದನದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ಅವರು ಏನು ಹೇಳಿದ್ದಾರೆಂದರೆ

"The Chairman of the Tata Group of Companies Mr. Ratan Tata said " the attraction of Bangalore as the hi-tech city was on the decline and the Hyderabad was fast emerging as a Computer City. What is so attractive about the Bangalore now? The Companies are moving towards Hyderabad, Mr. Tata told".

ಅಂದರೆ ಈ ರೀತಿಯಾಗಿ ಯಾರು ಇನ್‌ಫರ್ಮೇಷನ್ ಟೆಕ್ನಾಲಜಿ ಪಾರ್ಕ್, ಇದಕ್ಕೆ ಎಲ್ಲರೂ ಕೂಡ ಪ್ರಯತ್ನಿಸಿದರು, ಹಿಂದಿನ ಸರ್ಕಾರ ಕೂಡ ಬಹಳಷ್ಟು ಪ್ರಯತ್ನ ಪಟ್ಟು ಈ ಇನ್‌ಫರ್ಮೇಶನ್ ಟೆಕ್ನಾಲಜಿ ಪಾರ್ಕ್ ಹೈಟೆಕ್ ಬಗ್ಗೆ ಸಿಂಗಾಪುರ್‌ನವರ ಕೊಲಾಬರೇಷನ್‌ನಿಂದ ಮಾಡಿದರು. ಅಂಥ ಒಂದು ದೊಡ್ಡ ಇಂಡಸ್ಟ್ರೀಯಲಿಸ್ಟ್ ಭಾವನೆಯೇ ಈ ಸ್ಥಿತಿ ಇರಬೇಕಾದರೆ ಇಂದು ಬೆಂಗಳೂರು ಸಿಟಿ ತನ್ನ ಚಾರ್ಮ್‌ನ್ನು ಕಳೆದು ಕೊಳ್ಳುತ್ತಿದೆ, ಆದುದರಿಂದ ಇಲ್ಲಿ ಇಂಡಸ್ಟ್ರೀಯಲಿಸ್ಟ್ ಬರುವುದಕ್ಕೆ ತಯಾರಿಲ್ಲ ಎಂದು ಹೇಳಬೇಕಾದರೆ ನಿಮ್ಮ ಸರ್ಕಾರ ಇಂಡಸ್ಟ್ರೀಯಲ್ ಇನ್‌ಫ್ರಾಸ್ಟ್ರಕ್ಚರ್ ಬಗ್ಗೆ ತಯಾರು ಮಾಡುವುದರಲ್ಲಿ ಸಂಪೂರ್ಣ ವಿಫಲವಾಗಿದೆ ಹಾಗೂ ಆ ಕಡೆ ಲಕ್ಷ್ಯವನ್ನು ಕೊಡುತ್ತಿಲ್ಲವೆಂದು ನಾವು ಹೇಳಬೇಕಾಗುತ್ತದೆ. ಬಹುಶ: ದೇಶಪಾಂಡೆ ಮತ್ತು ನಿಮ್ಮ ಜಗಳದಲ್ಲಿ ಈ ಇನ್‌ಫ್ರಾಸ್ಟ್ರಕ್ಚರ್ ಎಲ್ಲಾ ಹಾಳಾಗಿದೆ....

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯ ಮಂತ್ರಿಗಳು):- ಮೊನ್ನೆ ಹೋಗಿ ನೋಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮೊನ್ನೆ ಹೋಗಿಬಿಟ್ಟರೆ ಆಯಿತೆ? ಕಳೆದ ಮೂರು ವರ್ಷಗಳಿಂದ ಅದನ್ನು ಹಿಡಿದುಕೊಂಡೇ ಕುಳಿತಿದ್ದೀವೆ. ನೀವು ಅವರಿಗೆ ಪ್ರೋತ್ಸಾಹವನ್ನೇ ಕೊಡುತ್ತಿದ್ದೀರಿ. ನೀವು ಮತ್ತು ಅವರು ಸೇರಿಕೊಂಡೇ ಹಾಳು ಮಾಡಿದ್ದು ತಾನೆ.

ಶ್ರೀ ಸಿದ್ಧರಾಮಯ್ಯ:- ಲಾಟ್ ಆಫ್ ಇಂಪ್ರೊವೆಮೆಂಟ್ ಆಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಲಾಟ್ ಆಫ್ ಇಂಪ್ರೊವ್‌ಮೆಂಟ್ ಆಗಿದ್ದರೆ ಇಂಥ ದೊಡ್ಡ ಉದ್ದಿಮೆದಾರರಿಂದ ಇಂಥ ಮಾತುಗಳು ಬರುತ್ತಲೇ ಇರಲಿಲ್ಲ.

ಶ್ರೀ ಸಿದ್ಧರಾಮಯ್ಯ:- ಪಟೇಲ್‌ರವರೇ ಇಂಪ್ರೊವ್‌ಮೆಂಟ್ ಬಗ್ಗೆ ಹೇಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಪಟೇಲ್‌ರವರು ಹೇಳುತ್ತಾರೆ. ಶಂಕರಾಚಾರ್ಯರ ಬಗ್ಗೆ ಮತ್ತು ಇಂಥ ನಾಲ್ಕು ಹರಿಕಥೆಗಳನ್ನು ಹೇಳಿಕೊಂಡು ಹೇಗೋ ಪಾರಾಗುತ್ತಾರಷ್ಟೆ. ಅವರು ಇವೊತ್ತಿನ

ದಿವಸ ಹರಿಕಥೆಗಳನ್ನೇ ಹೇಳಿಕೊಂಡು ಇಂತ ಮಾತನ್ನು ಹೇಳುತ್ತಾರೆ. ಅದಕ್ಕಾಗಿ ನಾನು ಇದರ ಬಗ್ಗೆಯೇ ಇನ್ನು ಹೆಚ್ಚಾಗಿ ಪ್ರಸ್ತಾಪ ಮಾಡದೆ ಅವರು ವಹಿಸಿ ಕೊಂಡಿರುವ ಇನ್ನೊಂದು ಇಲಾಖೆಯಾದ ಎಕ್ಸ್ಸೈಸ್ ಬಗ್ಗೆ ಹೇಳಬಯಸುತ್ತೇನೆ. ಈಗಾಗಲೇ ಇದರ ಬಗ್ಗೆ ಹೇಳಿದ್ದೇನೆ. ಆ ಎಕ್ಸೈಸ್ ಬಗ್ಗೆ ನೀವು ಪದೇ ಪದೇ ಎಷ್ಟು ಸಾರಿ ಪಾಲಿಸಿಯನ್ನು ಬದಲಾಯಿಸುತ್ತೀರಿ? ಮೂರು ವರ್ಷದೊಳಗೆ ನೀವು ಐದು ಬಾರಿ ಪಾಲಿಸಿಯನ್ನು ಬದಲಾಯಿಸಿದ್ದೀರಿ. ಒಂದು ಬಾರಿ ಪಂಚಾಯತ್ ಲೆವೆಲ್‌ನಲ್ಲಿ ಆಕ್ಷನ್ ಮಾಡೋಣ ಎಂದುಹೇಳುತ್ತೀರಿ, ಒಂದು ಬಾರಿ ತಾಲ್ಲೂಕು ಮಟ್ಟದಲ್ಲಿ ಆಕ್ಷನ್ ಮಾಡೋಣ ಎಂದು ಹೇಳುದಿರಿ, ಇನ್ನೊಂದು ಸಾರಿ ನೀವು ಜಿಲ್ಲಾ ಮಟ್ಟದಲ್ಲಿ ಮಾಡುತ್ತೀರೋ ಏನೋ ಗೊತ್ತಿಲ್ಲ. ಈ ಎಕ್ಸೈಸ್‌ನವರು ಹೇಗೆ ಹೇಗೆ ಹೇಳುತ್ತಾರೋ ಆ ರೀತಿಯಲ್ಲಿ ನೀವು ಕೇಳುತ್ತಿರೋ ಅಥವಾ ನಿಮಗೆ ಅನುಕೂಲವಾಗುವ ಹಾಗೆ ಮಾಡುತ್ತೀರೋ ನನಗಂತೂ ಗೊತ್ತಿಲ್ಲ.

ಶ್ರೀ ಸಿದ್ಧರಾಮಯ್ಯ :- ನಮ್ಮ ಹತ್ತಿರಕ್ಕೆ ಬಂದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನಿಮ್ಮ ಹತ್ತಿರಕ್ಕೆ ಬಂದಿಲ್ಲ ಅಂದ ಮೇಲೆ ನೀವು ಪಂಚಾಯತ್ ಲೆವಲ್‌ನಲ್ಲಿ ಮಾಡಿದಿರ, ಅದನ್ನು ಬೇಡ ಎಂದು ಹೇಳಿ ಪುನ: ವಾಪಸ್ ಬಂದಿರಿ. ಈ ಆಕ್ಷನ್ ಮಾಡುವ ಬಗ್ಗೆ ಪುನ: ತಾಲ್ಲೂಕು ಮಟ್ಟಕ್ಕೆ ವಾಪಸ್ ಬಂದಿರಿ.

ಶ್ರೀ ಸಿದ್ಧರಾಮಯ್ಯ :- ಈ ಬಗ್ಗೆ ಕೆಲವರು ಹೈಕೋರ್ಟ್ ಹೋಗಿ ಸ್ಟೇ ತೆಗೆದು ಕೊಂಡು ಬಂದಿದ್ದಾರೆ. ಅದು ಇನ್ನು ಹೈಕೋರ್ಟ್ ಮುಂದೆಯೇ ಇದೆ. ಅದಕ್ಕೆ ಅಂತಿಮವಾದಂಥ ನಿರ್ಣಯ ಬಂದಿಲ್ಲ. ಅದುಬರುವ ಮುಂಚೆಯೇ ನಾವು ಹೊಸ ಹೊಸ ಪಾಲಿಸಿಯನ್ನು ತಂದುಬಿಟ್ಟಿರುವಾಗ ಹೈಕೋರ್ಟ್‌ನವರು ಏನು ಹೇಳಿದ್ದಾರೆಂದರೆ ಆಕ್ಷನ್ ಮಾಡಿ ಅಥವಾ ಡಿಪಾರ್ಟ್‌ಮೆಂಟ್ ವ್ಯಾಪ್ತಿಯಲ್ಲಿ ನಡೆಸಿ ಎಂದು ಹೇಳಿದರು. ನಾವು ಆಕ್ಷನ್ ಮುಖಾಂತರ ಮಾಡಿದ್ದೇವೆ. ಹೈಕೋರ್ಟ್ ಅಂತಿಮ ತೀರ್ಮಾನವನ್ನು ಕೊಟ್ಟ ಮೇಲೆ ನಾವು ಇದರ ಬಗ್ಗೆ ಮತ್ತೆ ತೀರ್ಮಾನ ಮಾಡುತ್ತೇವೆ. Tht is the stand.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಎಮ್.ಎಸ್ ಐ. ಎಲ್. ಬಗ್ಗೆ ಸುಪ್ರೀಂ ಕೋರ್ಟ್ ನಿರ್ಣಯವನ್ನು ಮಾಡಿದರೆ ಅದಕ್ಕೆ ನೀವು ತಿದ್ದುಪಡಿಯನ್ನು ಮಾಡಿಕೊಂಡು ನಿಮಗೆ ಅನುಕೂಲ ಮಾಡಿ ಕೊಂಡಿರಿ. ಆದರೆ ಇದರ ಬಗ್ಗೆ ಹೊಸ ಪಾಲಿಸಿ... ನಿಮಗೆ ರೆವಿನ್ಯೂ ಲಾಸ್ ಆಗುತ್ತಿರುವಾಗ Why should not you think about this? When you are incurring heavy losses...

ಶ್ರೀ ಸಿದ್ಧರಾಮಯ್ಯ :- ಮಾಡಾಯಿತು ಬಜೆಟ್‌ನಲ್ಲಿ. That's what I have said in my budget speech.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನಿಮ್ಮ ಬಜೆಟ್‌ನಲ್ಲಿ ಹೇಳಿದರೆ ಆಯಿತೇ ; ಈಗ 100 ಕೋಟಿ ರೂ.ಗಳು ಹೋಯಿತಲ್ಲಾ, ಇದಕ್ಕೆ ಯಾರು ಕಾರಣಕರ್ತರು? ಈಗ 1994-95 ರಲ್ಲಿ ನಿಮ್ಮ ಗುರಿ 467 ಕೋಟಿ ರೂ. ಗಳಿತ್ತು.

ಶ್ರೀ ಸಿದ್ಧರಾಮಯ್ಯ:- ಎಕ್ಸ್‌ಪೆಕ್ಟೆಡ್

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಎಕ್ಸ್‌ಪೆಕ್ಟೆಡ್ 820 ಕೋಟಿ ರೂ.ಗಳಿತ್ತು. ಆದರೆ ನೀವು ಸಾಧನೆ ಮಾಡಿದ್ದು 467 ಕೋಟಿ ರೂ.ಗಳು. ಸಾರಿ, ನಾನುಹೇಳುತ್ತೇನೆ, 1995-96ನಲ್ಲಿ...

ಶ್ರೀ ಸಿದ್ಧರಾಮಯ್ಯ:- ನೀವು ಈ ಫಿಗರ್ ಎಲ್ಲಿ ತೆಗೆದುಕೊಂಡಿದ್ದೀರೋ ನನಗೆ ಗೊತ್ತಿಲ್ಲ. ಗುರಿ ಇದ್ದದ್ದು 940 ಕೋಟಿ ರೂ.ಗಳು , ಇದರಲ್ಲಿ ನಾವು ಆಲ್‌ವೋಸ್ಟ್ 900 ಕೋಟಿ ರೂ.ಗಳಷ್ಟು ಸಾಧನೆಯನ್ನು ಮಾಡಿದ್ದೇವೆ. ಎಲ್ಲಾ ಕಾಲದಲ್ಲೂ ಟಾರ್ಗೆಟ್ ಕೊಟ್ಟಷ್ಟನ್ನೂ ಸಾಧನೆ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಟಾರ್ಗೆಟ್‌ನಲ್ಲಿ ಶೇಕಡ 5 ಅಥವಾ 10 ಕಡಿಮೆಯಾದರೆ ಪರವಾಗಿಲ್ಲ. ಹಾಗಿಲ್ಲದೇ 20 ರಿಂದ 30 ಪರ್ಸೆಂಟ್ ವರೆಗೆ ಅಚೀವ್ ಕಡಿಮೆಯಾದರೆ ನಾವು ಏನು ಹೇಳಬೇಕಾಗುತ್ತದೆ.

ಶ್ರೀ ಸಿದ್ಧರಾಮಯ್ಯ :- ಮಾನ್ಯ ಅಧ್ಯಕ್ಷರೇ, 1996-97 ನೇ ಸಾಲಿಗೆ 820 ಕೋಟಿ ರೂ.ಗಳು ಆಗಿದೆ. ಅದರ ಮೇಲೆ ಶೇಕಡ 10 ರಷ್ಟು ಹೆಚ್ಚು ಗ್ರೋತ್ ಇಟ್ಟುಕೊಂಡು 940 ಕೋಟಿ ರೂ.ಗಳೆಂದು ಹೇಳಿದ್ದೆವು. ಕಳೆದ ವರ್ಷ 820 ಕೋಟಿ ರೂ.ಗಳನ್ನು ಕಲೆಕ್ಟ್ ಮಾಡಿ ಈ ವರ್ಷ ಸುಮಾರು 890 ಕೋಟಿ ರೂ.ಗಳನ್ನು ಕಲೆಕ್ಟ್ ಮಾಡುತ್ತೇವೆ. ಆದುದರಿಂದ ಇದರಲ್ಲಿ ಕಡಿಮೆಯೇನೂ ಆಗಿಲ್ಲ, ಇನ್ನೂ ಹೆಚ್ಚಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಹೌದೌದು, ಇವರು ಗುರಿ ಇಡುವುದೇ ಒಂದು, ಆಮೇಲೆ ಇದರಲ್ಲಿ ರಿವೈಸ್ ಮಾಡಿಕೊಳ್ಳುತ್ತಾರೆ. ಏಕೆಂದರೆ ಸಾಧನೆಯಾಗಲಿಲ್ಲವೆಂದರೆ ಟಾರ್ಗೆಟ್‌ನ್ನು ಕಡಿಮೆ ಮಾಡಿಕೊಳ್ಳುವುದು. ಕಡಿಮೆ ಮಾಡಿಕೊಂಡ ಮೇಲೆ ಮಾರ್ಚ್ ಕೊನೆಯೊಳಗೆ ಮತ್ತೆ 5 ಅಥವಾ 10 ಕೋಟಿ ಹೆಚ್ಚು ಕಲೆಕ್ಟ್ ಆದರೆ ಆಗ ನಮ್ಮ ಗುರಿಗಿಂತಲೂ ಹೆಚ್ಚಿಗೆ ನಾವು ಸಾಧನೆ ಮಾಡಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳುವ ಪ್ರಯತ್ನವನ್ನು ಮಾಡಿದ್ದಾರೆ. ಈಗ 1998-99 ರ ಸಾಲಿನಲ್ಲಿ 1050 ಕೋಟಿ ರೂ.ಗಳ ಗುರಿ ಎಂದುಹೇಳಿದ್ದಾರೆ. ಆದರೆ ಮತ್ತೆ ಇವರು ಯಾವುದಾದರೊಂದು ಪಾಲಿಸಿಯನ್ನು ಬದಲಾವಣೆ ಮಾಡುತ್ತಾರೆ. ಏಕೆಂದರೆ ಮೊದಲು ಪ್ರೊಹಿಬಿಷನ್ ಇಂಟ್ರಡ್ಯೂಸ್ ಮಾಡುತ್ತೇವೆಂದರು, ಆಮೇಲೆ ತಾಲ್ಲೂಕುವಾರು ಮಾಡಿದರು, ಆಮೇಲೆ ಪಂಚಾಯತ್ ರಾಜ್ ಮಾಡಿದರು, ಪಂಚಾಯತ್ ರಾಜ್ ಸರಿಯಿಲ್ಲದಿದ್ದರೆ ಮತ್ತೆ ತಾಲ್ಲೂಕುವಾರು ಬರುವುದು. ಹೀಗೆ ಪ್ರಯೋಗ ಮಾಡುವುದರಲ್ಲಿಯೇ ಈ ಇಲಾಖೆಗೆ ಕೋಟ್ಯಾಂತರ ರೂ.ಗಳ ಲುಕ್ಸಾನ ಆಗುತ್ತಿದೆ ಎನ್ನತಕ್ಕಂಥ ಮಾತನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ತಮ್ಮ ಮುಖಾಂತರ ಒಂದು ವಿಶೇಷವಾದ ಮಾತನ್ನು ಹೇಳಬಯಸುತ್ತೇನೆ. ನಿಜವಾಗಲೂ ಈ ಡೆವಲಪ್‌ಮೆಂಟ್ ವರ್ಕ್ ಬಗ್ಗೆ ಸರ್ಕಾರ ಆಸಕ್ತಿ ವಹಿಸಿ ರಿವ್ಯೂ ಮಾಡತಕ್ಕಂಥ ಕೆಲಸವನ್ನು ಮಾಡಿಲ್ಲ. ಈಹಿಂದೆ ಸ್ವತ: ಮುಖ್ಯಮಂತ್ರಿಗಳೇ ಮೂರು ತಿಂಗಳಿಗೊಮ್ಮೆ ಕುಳಿತು ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲಾ ಪರಿಷತ್‌ನ ಚೀಫ್ ಆಫೀಸರ್ಸ್‌ಗಳನ್ನು ಕರೆಸಿ ಯಾವ ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಆಗಿದೆ, ಅವರ ತೊಂದರೆಗಳೇನಿವೆ ಎನ್ನತಕ್ಕಂಥದ್ದನ್ನು ನೋಡಿ ಅವರಿಗೆ ಟಾರ್ಗೆಟ್‌ನ್ನು ಫಿಕ್ಸ್ ಮಾಡಿ ಮೂರು ತಿಂಗಳೊಳಗೆ ಸಾಧನೆ ಮಾಡಬೇಕೆಂದು ಹೇಳುತ್ತಿದ್ದರು. ಆದರೆ ಈಗ ವರ್ಷಾನುಗಟ್ಟಲೆ ಅವರುಗಳನ್ನು ಕರೆಸುವುದೂ ಇಲ್ಲ, ಮಾತನಾಡಿಸುವುದೂ ಇಲ್ಲ. ಒಂದು ವೇಳೆ ಕರೆಸಿದರೂ ವರ್ಷಾಂತ್ಯದಲ್ಲಿ ಈಗ ನಿಮ್ಮನ್ನು ಮಾತನಾಡಿಸಿದ ಹಾಗೆ ಮಾತನಾಡಿಸುತ್ತಾರೆ. ಏನೆಂದರೆ ಏನು ನೀವು ನಮ್ಮ ಪಕ್ಷದ ಬಗ್ಗೆಯೇ

ಮಾತನಾಡುತ್ತೀರಂತೆ, ಕೆಲಸವನ್ನು ಮಾಡುವುದಿಲ್ಲವಂತೆ ಎಂದು ಉಪದೇಶ ಮಾಡಿದ್ದಾರಲ್ಲಾ ಎನ್ನುವ ಮಾತುಗಳನ್ನು ಹೇಳಿಕೊಂಡು ರಿವ್ಯೂ ಮಾಡುತ್ತಾರೆಯೇ ಹೊರತು ನಿಜವಾಗಲೂ ಮೂರು ತಿಂಗಳಿಗೊಮ್ಮೆ ಡೆವಲಪ್‌ಮೆಂಟ್ ವರ್ಕ್ ಬಗ್ಗೆ ರಿವ್ಯೂ ಹಿಂದ ಏನು ನಡೆಯುತ್ತಿತ್ತು ಅದನ್ನು ಇವರು ಮಾಡುತ್ತಿಲ್ಲ. ಇದರಲ್ಲಿ ಇಂದಿನ ಸರ್ಕಾರ ಸಂಪೂರ್ಣವಾಗಿ ವಿಫಲಗೊಂಡಿದೆ. ಇನ್ನು ಮೇಲಾದರೂ ಕೂಡ ನಿಮ್ಮ ಗುರಿಯನ್ನು ಸಾಧಿಸುವ ಪ್ರಯತ್ನ ಮಾಡುತ್ತೀರಿ ಎಂದು ನಾವು ನಂಬಿದ್ದೇವೆ. ಬಹುಶ: ಅದು ಹುಸಿಯಾಗುತ್ತದೆ ಎಂದು ಹೇಳಿ ನನಗೆ ಈ ಅಂಕಿ ಅಂಶಗಳಿಂದ ಗೊತ್ತಾಗುತ್ತದೆ. ಮಾನ್ಯ ಉಪಾಧ್ಯಕ್ಷರು ನನಗೆ ಇಷ್ಟು ಮಾತುಗಳನ್ನು ಆಡುವುದಕ್ಕೆ ಅವಕಾಶ ಮಾಡಿಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

9) <u>ಶಾಸನಾತ್ಮಕ ನಿರ್ಣಯ</u>

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):- ಇಂಧನ ಖಾತೆ ರಾಜ್ಯ ಸಚಿವರ ಪರವಾಗಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಯಾವುದೇ ವೇಳೆಯಲ್ಲಿ ಮೇಲಿನ ಉಪ ನಿಯಮದ ಅನುಸಾರ ಪಡೆಯುವ ಸಾಲವು ಹತ್ತು ಕೋಟಿ ರೂಪಾಯಿಗಳಿಗಿಂತ ಅಧಿಕವಾದ ಪಕ್ಷದಲ್ಲಿ ವಿದ್ಯುಶ್ಚಕ್ತಿ ಸಾಲವು ಹತ್ತು ಕೋಟಿ ರೂಪಾಯಿಗಳಿಗಿಂತ ಅಧಿಕವಾದ ಪಕ್ಷದಲ್ಲಿ ವಿದ್ಯುಚ್ಛಕ್ತಿ (ಸರಬರಾಜು) ನಿಯಮ 1948 (ಕೇಂದ್ರ ನಿಯಮ 1948ರ ನಿಯಮ 54) ನಿಯಮ 65ರ ಉಪ ನಿಯಮ 3ರ ಅನುಸಾರ ಗರಿಷ್ಠ ಅಧಿಕ ಮೊತ್ತವನ್ನು ನಿಗಧಿಪಡಿಸಲು ರಾಜ್ಯ ವಿಧಾನ ಸಭೆಯ ಅನುಮೋದನೆ ಅಗತ್ಯವಿದೆ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಯಾವುದೇ ವೇಳೆಯಲ್ಲಿ ಪಡೆಯುವ ಸಾಲದಲ್ಲಿ 1995-96 ನೇ ಸಾಲಿಗೆ ಒಂದು ಸಾವಿರದ ಇನ್ನೂರೈವತ್ತು ಕೋಟಿ ರೂಪಾಯಿಗಳೆಂದು ಮತ್ತು 1996-97 ಹಾಗೂ ತದನಂತರಕ್ಕೆ ಒಂದು ಸಾವಿರದ ನಾಲ್ಕು ನೂರು ಕೋಟಿ ರುಪಾಯಿಗಳೆಂದು ನಿಗದಿಪಡಿಸಿದ್ದ ರಾಜ್ಯ ಸರ್ಕಾರದ ಪ್ರಸ್ತಾವನೆಗೆ ದಿನಾಂಕ 19-2-1997 ರಂದು ಕರ್ನಾಟಕ ವಿಧಾನ ಸಭೆಯ ಠರಾವುವನ್ನು ಒಪ್ಪುವ ಮೂಲಕ ಅನುಮೋದನೆ ನೀಡಲಾಗಿತ್ತು.

ಅದರಂತೆ, ಕರ್ನಾಟಕ ವಿದ್ಯುಶ್ಚಕ್ತಿ ಸರಬರಾಜು ನಿಯಮ 1948 ರ ನಿಯಮ 65 ಉಪನಿಯಮ 3ರ ಅನುಸಾರ ಕರ್ನಾಟಕ ಸರ್ಕಾರದ ಇಂಧನ ಇಲಾಖೆಯ ತನ್ನ ಅಧಿಸೂಚನೆ ಸಂಖ್ಯೆ: ಎಂಇ: 167: ಇಇಬಿ: 95 ದಿನಾಂಕ 26-2-1997 ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಯಾವುದೇ ವೇಳೆಯಲ್ಲಿ ಪಡೆಯುವ ಸಾಲದ ಮೊತ್ತವು 1995-96ನೇ ಸಾಲಿಗೆ ಒಂದು ಸಾವಿರದ ಇನ್ನೂರೈವತ್ತು ಕೋಟಿ ರೂಪಾಯಿಗಳೆಂದು ಮತ್ತು 1996-97 ನೇ ಸಾಲಿಗೆ ಹಾಗೂ ತದನಂತರಕ್ಕೆ ಒಂದು ಸಾವಿರದ ನಾಲ್ಕು ನೂರು ಕೋಟಿ ರೂಪಾಯಿಗಳೆಂದು ಉಪ ನಿಯಮ (1) ರನ್ವಯ ಆದೇಶಿಸಿದೆ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು 1997-98ನೇ ಸಾಲಿನಲ್ಲಿ ರೂ. 1493-00 ಕೋಟಿಗಳ ಹಣವನ್ನು ಮುಂದಾಲೋಚನೆಯಲ್ಲಿರುವ ಪ್ರಾಜೆಕ್ಟಗಳಿಗಾಗಿ ಪಡೆಯುವ ಸಾಲವನ್ನು ಪಾವತಿಸಬೇಕಾಗಿರುವುದರಿಂದ , ಆರ್‌ಇಸಿ, ಐಡಿಬಿಐ, ಪಿ ಎಫ್‌ಸಿ, ಮತ್ತು ವಾಣಿಜ್ಯ ಬ್ಯಾಂಕುಗಳ ಮುಖಾಂತರ ಹೆಚ್ಚುವರಿ ಸಾಲವನ್ನು ಪಡೆಯಬೇಕಾಗಿರುವುದರಿಂದ , ಇರುವ ಸಾಲದ ಮಿತಯನ್ನು ಹೆಚ್ಚಿಸಬೇಕಾಗುತ್ತದೆ. ಆದ್ದರಿಂದ ಕರ್ನಾಟಕ ವಿದ್ಯುಚ್ಛಕ್ತಿ (ಸರಬರಾಜು) ನಿಯಮ 1948ರ ನಿಯಮ